ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 215
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಬುಧವಾರ: 05-08-2026

ಸಂಪುಟ ವಿಸ್ತರಣೆ ಬಳಿಕ ಕಾಂಗ್ರೆಸ್‌ನಲ್ಲಿ ಅಸಮಾಧಾನದ ಅಲೆ : ಬೆಂಬಲಿಗರಿಂದ ರಾಜ್ಯದ ವಿವಿಧೆಡೆ ಪ್ರತಿಭಟನೆ

## ಸಂಪುಟ ಅಸಮಾಧಾನ: ರಾಜೀನಾಮೆ ಅಸ್ತ್ರದ ಚರ್ಚೆ

**ಬೆಂಗಳೂರು, ಆ.4:** ಸಚಿವ ಸಂಪುಟ ವಿಸ್ತರಣೆಯಲ್ಲಿ ಅವಕಾಶ ಸಿಗದ ಕಾಂಗ್ರೆಸ್ ಶಾಸಕರ ಅಸಮಾಧಾನ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ಹಿರಿಯ ಹಾಗೂ ಅನುಭವಿ ಶಾಸಕರು ಸಂಘಟಿತರಾಗಿ ಮುಂದಿನ ರಾಜಕೀಯ ಹೆಜ್ಜೆಗಳ ಕುರಿತು ಸಮಾಲೋಚನೆ ಆರಂಭಿಸಿದ್ದಾರೆ. ಹೈಕಮಾಂಡ್ ನಾಯಕರನ್ನು ಸಾಮೂಹಿಕವಾಗಿ ಭೇಟಿ ಮಾಡಿ ತಮ್ಮ ಅಸಮಾಧಾನವನ್ನು ಮನವರಿಕೆ ಮಾಡುವುದರ ಜೊತೆಗೆ, ಬೇಡಿಕೆಗಳಿಗೆ ಸ್ಪಂದನೆ ಸಿಗದಿದ್ದರೆ ಸಾಮೂಹಿಕ ರಾಜೀನಾಮೆ ಸೇರಿದಂತೆ ಕಠಿಣ ನಿರ್ಧಾರಗಳ ಆಯ್ಕೆಯ ಬಗ್ಗೆಯೂ ಚರ್ಚೆ ನಡೆದಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸಚಿವ ಸ್ಥಾನ ಕೈತಪ್ಪಿದ ಹಿನ್ನೆಲೆಯಲ್ಲಿ ಕೆಲ ಶಾಸಕರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಎಚ್ಚರಿಕೆ ನೀಡಿದ್ದರಾದರೂ, ರಾಜೀನಾಮೆ ಸಲ್ಲಿಸಿದರೆ ಕೂಡಲೇ ಅಂಗೀಕರಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ ಬಳಿಕ ಆ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ ಎನ್ನಲಾಗಿದೆ. ಆದಾಗ್ಯೂ ಅಸಮಾಧಾನಿತ ಶಾಸಕರ ಪ್ರತ್ಯೇಕ ಸಭೆ ನಡೆಯುವ ಸಾಧ್ಯತೆ ಕಾಂಗ್ರೆಸ್ ವಲಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ.

ಸಚಿವ ಸ್ಥಾನ ವಂಚಿತರಾದ ಕೆ.ಎನ್. ರಾಜಣ್ಣ, ಟಿ.ಬಿ. ಜಯಚಂದ್ರ, ಎಂ.ವೈ. ಗೋಪಾಲಕೃಷ್ಣ, ತನ್ವೀರ್ ಸೇಠ್, ದಿನೇಶ್ ಗುಂಡೂರಾವ್, ಆರ್.ವಿ. ದೇಶಪಾಂಡೆ, ಡಾ. ಎಚ್.ಸಿ. ಮಹದೇವಪ್ಪ, ಶಿವಾನಂದ ಪಾಟೀಲ, ಎಸ್.ಆರ್. ಶ್ರೀನಿವಾಸ್, ರಹೀಂ ಖಾನ್, ಬಿ.ಕೆ. ಸಂಗಮೇಶ್ವರ, ಪ್ರಸಾದ್ ಅಬ್ಬಯ್ಯ, ಹಂಪನಗೌಡ ಬಾದರ್ಲಿ ಸೇರಿದಂತೆ ಹಲವು ಹಿರಿಯ-ಕಿರಿಯ ಶಾಸಕರು ಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.



ಹಿರಿಯ ಹಾಗೂ ಕಿರಿಯ ಶಾಸಕರ ನಿಯೋಗವು ಶೀಘ್ರದಲ್ಲೇ ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಸಂಪುಟ ವಿಸ್ತರಣೆಯಲ್ಲಿ ಉಂಟಾಗಿರುವ ಅಸಮಾಧಾನ, ಪ್ರಾದೇಶಿಕ ಹಾಗೂ ಸಾಮಾಜಿಕ ಸಮತೋಲನದ ಪ್ರಶ್ನೆ ಮತ್ತು ಪಕ್ಷದೊಳಗಿನ ಬೆಳವಣಿಗೆಗಳ ಕುರಿತು ಮನವರಿಕೆ ಮಾಡಿಕೊಡಲು ನಿರ್ಧರಿಸಿದೆ. ಬೇಡಿಕೆಗಳನ್ನು ಪರಿಗಣಿಸದಿದ್ದರೆ ಸಾಮೂಹಿಕ ರಾಜೀನಾಮೆ ಸೇರಿದಂತೆ ರಾಜಕೀಯ ಒತ್ತಡದ ಮಾರ್ಗಗಳನ್ನು ಅನುಸರಿಸುವ ಕುರಿತು ಕೆಲ ನಾಯಕರು ಚರ್ಚಿಸಿರುವುದಾಗಿ ತಿಳಿದುಬಂದಿದೆ.

ಈ ಬೆಳವಣಿಗೆಗಳು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹೊಸ ತಲೆನೋವಾಗಿ ಪರಿಣಮಿಸಿದ್ದು, ಅಸಮಾಧಾನಿತ ಶಾಸಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಸಮಾಧಾನಪಡಿಸುವ ಪ್ರಯತ್ನಗಳು ನಡೆಯುತ್ತಿವೆ ಎನ್ನಲಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಸಚಿವರ ಆಯ್ಕೆ ಕುರಿತ ಬೆಳವಣಿಗೆಗಳ ಬಗ್ಗೆ ಅಸಮಾಧಾನ ಹೊಂದಿದ್ದು, ನಡೆಯುತ್ತಿರುವ ಸಂಧಾನ ಪ್ರಕ್ರಿಯೆಯಿಂದ ದೂರ ಉಳಿದಿದ್ದಾರೆ ಎಂಬ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬರುತ್ತಿವೆ. ಇನ್ನೊಂದೆಡೆ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದ ಬಿ.ಕೆ. ಹರಿಪ್ರಸಾದ್ ಕೂಡ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಂಪುಟ ವಿಸ್ತರಣೆ ವೇಳೆ ಸಚಿವರ ಪಟ್ಟಿಯನ್ನು ಹಲವು ಬಾರಿ ಪರಿಷ್ಕರಿಸಲಾಗಿದೆ ಎಂಬ ಚರ್ಚೆಯೂ ಪಕ್ಷದಲ್ಲಿ ನಡೆಯುತ್ತಿದೆ. ಹಿಂದುಳಿದ ವರ್ಗದ ಕೆಲವು ನಾಯಕರಿಗೆ ಅವಕಾಶ ಸಿಗದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ.

ಪಕ್ಷದಲ್ಲಿ ನಿಷ್ಠೆ, ಪ್ರಾಮಾಣಿಕತೆ ಹಾಗೂ ಸೈದ್ಧಾಂತಿಕ ಬದ್ಧತೆಗೆ ಸೂಕ್ತ ಮೌಲ್ಯ ಸಿಗುತ್ತಿಲ್ಲ ಎಂಬ ಆರೋಪಗಳು ಕೇಳಿಬರುತ್ತಿದ್ದು, ಇದೇ ಪರಿಸ್ಥಿತಿ ಮುಂದುವರಿದರೆ ಕೆಲ ನಾಯಕರು ತಮ್ಮ ಮುಂದಿನ ರಾಜಕೀಯ ನಿರ್ಧಾರಗಳನ್ನು ಮರುಪರಿಶೀಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. 2028ರ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಈಗಿನ ಲೋಪಗಳನ್ನು ಸರಿಪಡಿಸುವಂತೆ ಹೈಕಮಾಂಡ್‌ಗೆ ಮನವಿ ಸಲ್ಲಿಸಲು ಅಸಮಾಧಾನಿತ ಶಾಸಕರು ಶೀಘ್ರದಲ್ಲೇ ಸಭೆ ನಡೆಸುವ ಸಾಧ್ಯತೆಯಿದೆ.

ಈ ನಡುವೆ ಸಚಿವ ಸ್ಥಾನ ವಂಚಿತರ ಬೆಂಬಲಿಗರು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ. ಬೆಂಗಳೂರಿನಲ್ಲಿ ಎಂ. ಕೃಷ್ಣಪ್ಪ ಹಾಗೂ ಎನ್.ಎ. ಹ್ಯಾರಿಸ್ ಬೆಂಬಲಿಗರು ರಸ್ತೆ ತಡೆ ನಡೆಸಿದರೆ, ರಾಯಚೂರುದಲ್ಲಿ ಹಂಪನಗೌಡ ಬಾದರ್ಲಿ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಸೇರಿದಂತೆ ಹಲವು ಜಿಲ್ಲೆಗಳಲ್ಲೂ ಕಾರ್ಯಕರ್ತರ ಅಸಮಾಧಾನ ಬಹಿರಂಗಗೊಂಡಿದೆ.

## ಕೃಷ್ಣಾ ನದಿ ತೀರದ ಗ್ರಾಮಗಳಲ್ಲಿ ಮುಂಜಾಗ್ರತೆ ಜಿಲ್ಲಾಧಿಕಾರಿ ಪೂವಿತಾ ಎಸ್. ಸೂಚನೆ



ಧೈರ್ಯದ ದಾರಿ

**ರಾಯಚೂರು ಆಗಸ್ಟ್ 04:** ಕೃಷ್ಣಾ ಹಾಗೂ ಭೀಮಾ ನದಿಗಳಿಗೆ ನೀರು ಬಿಡುವುದರಿಂದ
ಜಿಲ್ಲೆಯ ಕೃಷ್ಣಾ ನದಿ ತೀರದ ಗ್ರಾಮಗಳಲ್ಲಿ ಮುಂಜಾಗ್ರತೆ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಪೂವಿತಾ ಎಸ್. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.
ಮಹಾರಾಷ್ಟ್ರ ರಾಜ್ಯದ ಕೃಷ್ಣಾ ಹಾಗೂ ಭೀಮಾ ನದಿಯ ಜಲಾನಯನ ಪ್ರದೇಶಗಳಲ್ಲಿ ಕಳೆದ ಒಂದು ವಾರದಿಂದ ಭಾರಿ ಪ್ರಮಾಣದಲ್ಲಿ ಮಳೆಯಾಗುತ್ತಿದೆ. ಕೃಷ್ಣಾ ನದಿಗೆ ನಾರಾಯಣಪೂರ ಜಲಾಶಯದಿಂದ ಈಗಾಗಲೇ ಸುಮಾರು 1,50,000 ಕ್ಯೂಸೆಕ್ಸ್ ಹಾಗೂ ಸನ್ನತಿ ಬ್ಯಾರೆಜ್ ನಿಂದ ಭೀಮಾ ನದಿಗೆ ಸುಮಾರು 85,000 ಕ್ಯೂಸೆಕ್ಸ್ ನೀರು ಬಿಡುಗಡೆಗೊಳಿಸುತ್ತಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನದಿಗೆ ನೀರು ಬಿಡುವ ಸಂಭವವಿರುವುದರಿಂದ ರಾಯಚೂರು ಜಿಲ್ಲೆಯ ಕೃಷ್ಣಾ ನದಿ ತೀರದ ಗ್ರಾಮಗಳಲ್ಲಿ ಮುಂಜಾಗ್ರತೆ ತೆಗೆದುಕೊಳ್ಳುವುದು ಅವಶ್ಯಕತೆ ಇರುತ್ತದೆ. ಆದುದರಿಂದ ರಾಯಚೂರು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ನೀರು ಬಿಡುವ ಕುರಿತು ಕೃಷ್ಣಾ ನದಿಗೆ ಸಂಬಂಧಿಸಿದ ಜಿಲ್ಲಾ, ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿಗಳು ಈ ಕೆಳಗಿನಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.
ಸೂಚನೆಗಳು: ನೀರು ಬಿಡುಗಡೆಗೊಳಿಸಲಾಗಿದೆ. 2ನೇಪುಟಕ್ಕೆ

## ವಿವಿಧ ಮಹಾನಿಯರ ವೃತ್ತ ಹಾಗೂ ಪುತ್ಥಳಿ ಸ್ಥಾಪನೆಗಾಗಿ ಅನಿರ್ಧೀಷ್ಠಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಮಹಾತ್ಮಗಾಂಧಿ ವೃತ್ತದ ಹತ್ತಿರ ವಿವಿಧ ಮಹಾನಿಯರ ವೃತ್ತ ಹಾಗೂ ಪುತ್ಥಳಿ ಸ್ಥಾಪನೆ ಹೋರಾಟ ಸಮಿತಿ ವತಿಯಿಂದ ಹಮ್ಮಿಕೊಂಡ ಅನಿರ್ಧೀಷ್ಠಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹದಲ್ಲಿ ಮಹಾತ್ಮ ಗಾಂಧಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಹೋರಾಟಕ್ಕೆ ಚಾಲನೆ ನೀಡಿ ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ ಮಾತನಾಡಿ ಪಟ್ಟಣದಲ್ಲಿ ಮಾನ್ವಿ ಪುರಸಭೆಯಿಂದ ರಾಯಚೂರ ನಿಂದ ಸಿಂಧನೂರು ರಸ್ತೆವರೆಗೆ ಡಾ.ಬಿ.ಆರ್.ಅಂಬೇಡ್ಕರ್, ವಿಶ್ವಗುರು ಶ್ರೀ ಬಸವೇಶ್ವರ ,ಛತ್ರಪತಿ ಶಿವಾಜಿ, ಮಹಾತ್ಮಗಾಂಧಿ , ಶ್ರೀ ಮಹರ್ಷಿ ವಾಲ್ಮೀಕಿ ವೃತ್ತಗಳು ಅನುಮೋದನೆಗೊಂಡು ವೃತ್ತಗಳ ನಿರ್ಮಾಣವಾಗಿದ್ದರು ಕೂಡ ಇದುವರೆಗೂ ಈ ವೃತ್ತಗಳಲ್ಲಿ ವಿವಿಧ ಮಹಾನಿಯರ ಪುತ್ತಳ್ಳಿಗಳನ್ನು ಕೂಡಿಸುವುದಕ್ಕೆ ಕ್ರಮ ಕೈಗೊಳ್ಳುವಂತೆ ತಾಲೂಕು ಆಡಳಿತ ಹಾಗೂ ಜಿಲ್ಲಾಡಳಿತ ಸೇರಿದಂತೆ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರು ಕೂಡ ಇದುವರೆಗೂ ಕೂಡ ಪಟ್ಟಣದ ವೃತ್ತಗಳಲ್ಲಿ ಮಹಾನಿಯರ ಪುತ್ತಳ್ಳಿಗಳನ್ನು ಕೂಡಿಸಿಲ್ಲ ಪ್ರಸ್ತುತ ಕಲ್ಮಲದಿಂದ ಸಿಂಧನೂರು ವರೆಗೆ ನಿರ್ಮಾಣವಾಗುತ್ತಿರುವ ಬಹುಕೋಟಿ ವೆಚ್ಚದ ಚತುಷ್ಪತ ರಸ್ತೆ ನಿರ್ಮಾಣ ಮಾಡುತ್ತಿರುವ ಸಂಸ್ಥೆಯವರು ಹಾಗೂ ಕೆ.ಎಸ್.ಆರ್.ಡಿ.ಸಿ ಇಲಾಖೆಯ ಅಧಿಕಾರಿಗಳು ರಸ್ತೆ ಕಾಮಗಾರಿ ಪಟ್ಟಣದಲ್ಲಿ ಶೇ.80 ರಷ್ಟು ಪೂರ್ಣವಾಗಿದ್ದರು ಕೂಡ ಪಟ್ಟಣದಲ್ಲಿನ ಮಹಾನಿಯರ ವೃತ್ತಗಳ ಅಭಿವೃದ್ಧಿ ಹಾಗೂ ಪುತ್ಥಳ್ಳಿಗಳ ಸ್ಥಾಪನೆ ಕುರಿತು ಇದುವರೆಗೂ ಕೂಡ ಯಾವುದೆ ಕ್ರಮ ಕೈಗೊಂಡಿಲ್ಲದೆ ಇರುವುದು 2ನೇಪುಟಕ್ಕೆ

## ಎಡದಂಡೆ ಕಾಲುವೆಗೆ ತಕ್ಷಣ ನೀರು ಹರಿಸಿ: ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಆಗ್ರಹ

ಧೈರ್ಯದ ದಾರಿ

**ಮಾನ್ವಿ:** ಎಡದಂಡೆ ಕಾಲುವೆಗೆ ನೀರು ಹರಿಸಲು ಸರ್ಕಾರ ಕೂಡಲೇ ಐಸಿಸಿ (ICC) ಸಭೆ ಕರೆದು ಭತ್ತದ ಬೆಳೆಗೆ ನೀರು ಒದಗಿಸಬೇಕು. ಇಲ್ಲದಿದ್ದರೆ ರೈತರೊಂದಿಗೆ ಸೇರಿ ಜೆಡಿಎಸ್ ಪಕ್ಷದ ವತಿಯಿಂದ ರಸ್ತೆಗಿಳಿದು ಉಗ್ರ ಹೋರಾಟ ನಡೆಸಲಾಗುವುದು ಎಂದು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಎಚ್ಚರಿಕೆ ನೀಡಿದರು.
ಪಟ್ಟಣದ ಜೆಡಿಎಸ್ ಪಕ್ಷದ ಕಾರ್ಯಾಲಯದಲ್ಲಿ ಮಂಗಳವಾರ ಮಾನ್ವಿ ಹಾಗೂ ಸಿರವಾರ ತಾಲೂಕು ಜೆಡಿಎಸ್ ಪಕ್ಷದ ವತಿಯಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.ಕಳೆದ ಬೇಸಿಗೆ ಹಂಗಾಮಿನಲ್ಲಿ ಗೇಟ್ ದುರಸ್ತಿಯ ನೆಪವೊಡ್ಡಿ, ಡ್ಯಾಂನಲ್ಲಿ ಸಾಕಷ್ಟು ನೀರಿನ ಸಂಗ್ರಹವಿದ್ದರೂ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ರೈತರಿಗೆ ನೀರು ಒದಗಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. ಇದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಭತ್ತದ ಬೆಳೆಗೂ ಹಾನಿಯಾಗಿದೆ ಎಂದು ಹೇಳಿದರು.



ಪ್ರಸ್ತುತ ಜಲಾಶಯದಲ್ಲಿ ಸುಮಾರು 51 ಟಿಎಂಸಿ ನೀರಿನ ಸಂಗ್ರಹವಿದ್ದು, 91 ಸಾವಿರ ಕ್ಯೂಸೆಕ್ಸ್ ಒಳಹರಿವು (Inflow) ಬರುತ್ತಿದೆ. ಮೇಲ್ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಇನ್ನೂ ನಾಲ್ಕೈದು ದಿನಗಳಲ್ಲಿ ಅಥವಾ ವಾರದೊಳಗೆ ನೀರಿನ ಸಂಗ್ರಹ 70 ಟಿಎಂಸಿ ದಾಟುವ ಸಾಧ್ಯತೆಯಿದೆ. ಆದ್ದರಿಂದ ಸರ್ಕಾರ ಯಾವುದೇ ವಿಳಂಬ ಮಾಡದೆ ಐಸಿಸಿ ಸಭೆ ನಡೆಸಿ ಎಡದಂಡೆ ಕಾಲುವೆಗೆ ನೀರು ಹರಿಸುವ ಮೂಲಕ ಮಾನ್ವಿ ಹಾಗೂ ಸಿರವಾರ ಭಾಗದ ರೈತರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು.
ಮಾನ್ವಿ ಮತ್ತು ಸಿರವಾರ ಭಾಗದ ರೈತರು ಈಗಾಗಲೇ ಭತ್ತ ಬಿತ್ತನೆ ಮಾಡಿದ್ದು, ಕೂಡಲೇ ನೀರು ಹರಿಸಿದರೆ ಬೆಳೆ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಸರ್ಕಾರ ನಿರ್ಲಕ್ಷ್ಯ ಮುಂದುವರಿಸಿದರೆ ರೈತರೊಂದಿಗೆ ಸೇರಿ ಜೆಡಿಎಸ್ ಪಕ್ಷದ ವತಿಯಿಂದ ರಸ್ತೆಗಿಳಿದು ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮಾನ್ವಿ ತಾಲೂಕು ಅಧ್ಯಕ್ಷ ಈರಣ್ಣ ಮರ್ಲಟ್ಟಿ, ಸಿರವಾರ ತಾಲೂಕು ಅಧ್ಯಕ್ಷ ಟಿ. ಮಲ್ಲಿಕಾರ್ಜುನ ಬಲ್ಲಟಗಿ, ರೈತ ಘಟಕದ ಅಧ್ಯಕ್ಷ ಶರಣಪ್ಪಗೌಡ ಮದ್ಲಾಪುರ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ನೂತನ ಸಚಿವ ರಿಜ್ವಾನ್ ಅರ್ಷದ್ ಅವರನ್ನು ಭೇಟಿ ಮಾಡಿದ ಡಿ.ಎಸ್. ಹೂಲಗೇರಿ; ಶುಭ ಹಾರೈಕೆ

ಧೈರ್ಯದ ದಾರಿ



**ಲಿಂಗಸುಗೂರು :** ನೂತನ ಸಚಿವರಾಗಿ ಅಧಿಕಾರ ಸ್ವೀಕರಿಸಿರುವ ರಿಜ್ವಾನ್ ಅರ್ಷದ್ ಅವರನ್ನು ಮಾಜಿ ಶಾಸಕ ಕೆಪಿಸಿಸಿ ಉಪಾಧ್ಯಕ್ಷ ಡಿ.ಎಸ್. ಹೂಲಗೇರಿ ಅವರು ಭೇಟಿ ಮಾಡಿ ಶುಭ ಹಾರೈಸಿದರು.
ಈ ವೇಳೆ ಸಚಿವ ರಿಜ್ವಾನ್ ಅರ್ಷದ್ ಅವರಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದ ಡಿ.ಎಸ್. ಹೂಲಗೇರಿ ಅವರು, ಸಚಿವರ ರಾಜಕೀಯ ಪಯಣ ಮತ್ತಷ್ಟು ಯಶಸ್ವಿಯಾಗಲಿ ಹಾಗೂ ರಾಜ್ಯದ ಅಭಿವೃದ್ಧಿಗೆ ಅವರಿಂದ ಉತ್ತಮ ಸೇವೆ ದೊರೆಯಲಿ ಎಂದು ಶುಭಾಶಯ ಕೋರಿದರು.
ಈ ಸಂದರ್ಭದಲ್ಲಿ ಮಾಜಿ ಸಚಿವ ಎನ್.ಎಸ್. ಬೋಸರಾಜ್, ಮಸ್ಕಿ ಶಾಸಕ ಬಸವನಗೌಡ ತುರ್ವಿಹಾಳ್, ಕೆಪಿಸಿಸಿ ಸದಸ್ಯ ಅಮರಗುಂಡಪ್ಪ ಮೇಟಿ, ಲಿಂಗಸುಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

## ಮಾನ್ವಿ: ಕೊನಾಪುರಪೇಟೆ ಸರ್ಕಾರಿ ಎಲ್.ಕೆ.ಜಿ, ಯು.ಕೆ.ಜಿ ಶಾಲೆ ಮಕ್ಕಳಿಗೆ ದಾನಿಗಳಿಂದ ಉಚಿತ ಸಮವಸ್ತ್ರ, ಸ್ಟಿಲ್ ಗ್ಲಾಸ್ ಗಳ ವಿತರಣೆ

ಧೈರ್ಯದ ದಾರಿ

**ಮಾನ್ವಿ:** ನಗರದ ಕೊನಾಪುರಪೇಟೆಯ ಉನ್ನತಿಕರಿಸಿದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ ಕೆಜಿ,ಯುಕೆಜಿಯ 56 ಮಕ್ಕಳಿಗೆ ದಾನಿಗಳ ನೆರವಿನೊಂದಿಗೆ ಉಚಿತ ಸಮವಸ್ತ್ರ ಹಾಗೂ ಹಾಲು ಕುಡಿಯುವ ಸ್ಟಿಲ್ ಗ್ಲಾಸ್ ಗಳನ್ನು ವಿತರಣೆ ಮಾಡುವ ಮೂಲಕ ಮಕ್ಕಳಲ್ಲಿ ಕಲಿಕೆಯ ಉತ್ಸಾಹವನ್ನು ಇಮ್ಮಡಿಗೊಳಿಸಿದ್ದಾರೆ.



ಪಟ್ಟಣದ ಕೊನಾಪುರಪೇಟೆಯ ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಆಂಗ್ಲ ಮಾಧ್ಯಮ ಎಲ್ ಕೆಜಿ,ಯುಕೆಜಿ ತರಗತಿಗಳು ಪ್ರಾರಂಭವಾಗಿದ್ದು ಮಕ್ಕಳ ಕಲಿಕೆ ಗುಣಮಟ್ಟವನ್ನು ಹೊಂದಿದ್ದು ಮಕ್ಕಳ ದಾಖಲಾತಿ ಕೂಡ ಹೆಚಾಗಿದ್ದು, ಇದಕ್ಕೆ ಸ್ಥಳೀಯರು ತಮ್ಮ ಸಹಕಾರ ನೆರವು ನೀಡುತ್ತಿದ್ದಾರೆ. ಸ್ಥಳೀಯ ದಾನಿಗಳಾದ ಮಲ್ಲಟ ಕಂದಾಯ ನಿರೀಕ್ಷಕರಾದ ಕೆ.ಟಿ.ಅರಳಪ್ಪ, ರವಿಕುಮಾರ್ ವಕೀಲರು, ಸಿರವಾರ ತಾ.ಪಂ. ವಸತಿ ನೋಡಲ್ ಅಧಿಕಾರಿ ಗೋಪಾಲ ಬಡಿಗೇರ ಹಾಗೂ ಎಸ್. ಕೆ. ಕ್ಲಿನಿಕ್ ಮಾನ್ವಿ, ಅಜಿ ಮಲ್ಲಿಂಗ್, ಲಕ್ಷ್ಮಿ ಬಸವರಾಜ ಮುಖ್ಯ ಅಡುಗೆ ಸಿಬ್ಬಂದಿ ಕೋನಾಪುರಪೇಟೆ ಶಾಲೆ ಈ ಎಲ್ಲಾ ಸ್ಥಳೀಯ ದಾನಿಗಳ 2ನೇಪುಟಕ್ಕೆ

ಮೊದಲನೇ ಪುಟದಿಂದ

# ಕೃಷ್ಣಾ ನದಿ ತೀರದ ಗ್ರಾಮಗಳಲ್ಲಿ ಮುಂಜಾಗೃತೆ ಜಿಲ್ಲಾಧಿಕಾರಿ ಪೂವಿತಾ ಎಸ್. ಸೂಚನೆ

ಹಾಗೂ ಅದೇ ರೀತಿ ಸನ್ನತಿ ಬ್ಯಾರೆಜ್ ನಿಂದ ಭೀಮಾ ನದಿಗೆ ಸುಮಾರು 85,000 ಕ್ಯೂಸೆಕ್ಸ್ ನೀರು ಬಿಡುಗಡೆಗೊಳಿಸುತ್ತಿದ್ದು ಹಾಗೂ ನದಿ/ಹಳ್ಳ/ಕೆರೆ ದಡದಲ್ಲಿ ಬಟ್ಟೆ ತೊಳಿಯುವುದು, ಈಜಾಡುವುದು, ದನ/ಕರುಗಳನ್ನು ಮೆಯಿಸುವುದು ಹಾಗೂ ಅಪಾಯವಿರುವ ಸೇತುವೆಗಳಲ್ಲಿ ಸಂಚರಿಸುವುದು ಮತ್ತು ಇತರೆ ಚಟುವಟಿಕೆ ನಡೆಸದಂತೆ ಕ್ರಮವಹಿಸುವುದು.

ನದಿ/ಹಳ್ಳ/ಕೆರೆ ದಡದಲ್ಲಿರುವ ಗುಡಿ/ಮಸಿದಿ/ಚರ್ಚ್ ಗಳಲ್ಲಿ ಪೂಜೆ ಸಲ್ಲಿಸುವವರನ್ನು ಮನಒಲಿಸಿ ನದಿ/ಹಳ್ಳ/ಕೆರೆ ದಡದಲ್ಲಿ ತೆರಳದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು.

ನದಿ ದಡದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ಅಪಾಯವಿರುವ ನದಿ/ಹಳ್ಳಗಳಲ್ಲಿ ಈಜಾಡುವುದು ಮತ್ತು ಫೋಟೋ/ಸೆಲ್ಫಿಗಳನ್ನು ತೆಗೆಯದಂತೆ ಕ್ರಮವಹಿಸುವುದು.

ನದಿಗೆ ನೀರು ಬಿಡುವ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಯಾಗದಂತೆ ಪ್ರತಿ ಗ್ರಾಮಗಳಲ್ಲಿ ಡಂಗೂರ ಸಾರುವುದು/ಮೈಕ್ ಮೂಲಕ ಜಾಗೃತಿ ಮೂಡಿಸುವುದು.

ಪ್ರಕೃತಿ ವಿಕೋಪದಿಂದ ಯಾವುದೇ ರೀತಿಯ ಘಟನೆಗಳು ಸಂಭವಿಸಿದ್ದಲ್ಲಿ ಅಥವಾ ಸಂಭವಿಸಬಹುದಾದ ಸೂಚನೆ ಇದ್ದಲ್ಲಿ ಸಾರ್ವಜನಿಕರು ಕೂಡಲೇ ಸಂಬಂಧಪಟ್ಟ ಪಂಚಾಯತ್/ನಗರ ಸ್ಥಳೀಯ ಸಂಸ್ಥೆಗಳಿಗೆ ಮಾಹಿತಿಯನ್ನು ನೀಡುವುದರ ಮೂಲಕ ರಾಯಚೂರು ಜಿಲ್ಲೆಯ ಕೃಷ್ಣಾ ನದಿಗೆ ಸಂಬಂಧಿಸಿದ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿ, ಸಿಬ್ಬಂದಿಗಳು ಯಾವುದೇ ಅಹಿತಕರ ಘಟನೆಯಾಗದಂತೆ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಸದರಿ ವಿಷಯದಲ್ಲಿ ನಿರ್ಲಕ್ಷ್ಯವಹಿಸುವಂತಹ ಅಧಿಕಾರಿ, ಸಿಬ್ಬಂಧಿಗಳ ಮೇಲೆ ವಿಪತ್ತು ನಿರ್ವಹಣಾ ಕಾಯ್ದೆ–2005ರ ರಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಪೂವಿತಾ ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧ ಮಹಾನಿಯರ ವೃತ್ತ ಹಾಗೂ ಪುತ್ಥಳಿ ಸ್ಥಾಪನೆಗಾಗಿ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹ

ಪಟ್ಟಣದ ಎಲ್ಲಾ ಸಮುದಾಯಗಳ ಭಾವನೆಗಳಿಗೆ ದಕ್ಕೆ ಉಂಟುಮಾಡಿದು ಇನ್ನೂ 10 ದಿನಗಳಲ್ಲಿ ಪಟ್ಟಣದ ವಿವಿಧ ಮಹಾನಿಯರ ವೃತ್ತಗಳನ್ನು ಅಭಿವೃದ್ದಿ ಪಡಿಸಿ ಪುತ್ಥಳಿಗಳನ್ನು ಕೂಡಿಸದೆ ಇದ್ದಲ್ಲಿ ಪಟ್ಟಣದ ಎಲ್ಲಾ ಸಮುದಾಯಗಳವರು ಸೇರಿಕೊಂಡು ಪಟ್ಟಣದ ವಿವಿಧ ಮಹಾನಿಯರ ವೃತ್ತಗಳನ್ನು ಅಭಿವೃದ್ದಿಪಡಿಸಿ ಪುತ್ಥಳಿಗಳನ್ನು ಕೂಡಿಸುವಂತೆ ಒತ್ತಾಯಿಸಿ ಬೃಹತ್ ಹೋರಾಟ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಮಾಜಿ ಶಾಸಕ ಗಂಗಾಧರ ನಾಯಕ ಮಾತನಾಡಿ ತಾಲೂಕಿನ ಜನರ ಹಾಗೂ ವಾಹನಗಳ ಸಂಚಾರಕ್ಕೆ ಅನುಕೂಲವಾಗುವಂತೆ ರಾಜ್ಯ ಸರಕಾರದಿಂದ ಕೆ.ಎಸ್.ಆರ್.ಡಿ.ಸಿ. ಇಲಾಖೆ ಮೂಲಕ 1688 ಕೋಟಿ ವೆಚ್ಚದಲ್ಲಿ 78 ಕಿ.ಮಿ.ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದು ರಸ್ತೆ ನಿರ್ಮಾಣ ಕಾಮಗಾರಿ ಗುತ್ತಿಗೆ ಪಡೆದ ಸಂಸ್ಥೆಯವರು ಅಂದಾಜು ಪಟ್ಟಿಯಲ್ಲಿರುವಂತೆ ಕಾಮಗಾರಿಯನ್ನು ಗುಣಮಟ್ಟದಲ್ಲಿ ಕೈಗೊಳ್ಳದೆ ಇದ್ದರು ಕೂಡ ಕೆ.ಎಸ್.ಆರ್.ಡಿ.ಸಿ. ಇಲಾಖೆಯವರು ಅಗತ್ಯ ಕ್ರಮ ಕೈಗೊಳ್ಳದೆ ಇರುವುದರಿಂದ ಕೇಲವೆ ವರ್ಷಗಳಲ್ಲಿ ರಸ್ತೆ ಹಾಳಗಲಿದೆ. ತಾಲೂಕು ಆಡಳಿತ ಹಾಗೂ ಪುರಸಭೆ ಅಧಿಕಾರಿಗಳು ಪಟ್ಟಣದ ಅಭಿವೃದ್ದಿಗೆ ಸ್ಪಂದಿಸುತ್ತಿಲ್ಲ ಎಂದು ಅರೋಪಿಸಿದರು.

ಮಾಜಿ ಬಿ.ಜೆ.ಪಿ. ಮಾನ್ವಿ ಮಂಡಲ ಅಧ್ಯಕ್ಷರಾದ ಜಿ.ಸುಧಾಕರ್ , ಮುಖಂಡರಾದ ತಿಮ್ಮರೆಡ್ಡಿ ಭೋಗವತಿ, ಶರಣೆಗೌಡ ನಕ್ಕುಂದಿ,ರಂಗಪ್ಪ, ಮಾತನಾಡಿದರು.

ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರ ಪಾಟೀಲ್, ಮುಖಂಡರಾದ ಉಮೇಶ ಸಜ್ಜನ್, ಗುರುಸಿದ್ದಪ್ಪ ಕಣ್ಣೂರು,ಹನುಮೇಶ ನಾಯಕ ಸದಾಪುರ್,ಶ್ರೀ ನಗರೇಶ್ವರ ಆರ್ಯವೈಶ್ಯ ಸಮಾಜದ ತಾಲೂಕು ಅಧ್ಯಕ್ಷರಾದ ಆರ್.ಮುತ್ತುರಾಜ ಶೆಟ್ಟಿ,ಕಾರ್ಯದರ್ಶಿ ಬಿ.ಈರಣ್ಣ, ಶಾಂತಿಲಾಲ್ ಸೇಟ್,ಬಸವರಾಜ ನಕ್ಕುಂದಿ,ಗೋಪಾಲ ಇಬ್ರಾಂಪುರ್ ಸೇರಿದಂತೆ ಇನ್ನಿತರರು ಇದ್ದರು.

# ಮಾನ್ವಿ: ಕೊನಾಪುರಪೇಟೆ ಸರ್ಕಾರಿ ಎಲ್.ಕೆ.ಜಿ, ಯು.ಕೆ.ಜಿ ಶಾಲೆ ಮಕ್ಕಳಿಗೆ ದಾನಿಗಳಿಂದ ಉಚಿತ ಸಮವಸ್ತ್ರ, ಸ್ಟಿಲ್ ಗ್ಲಾಸ್ ಗಳ ವಿತರಣೆ

ನೇರವಿನಿಂದಾಗಿ ಇಂದು ಎಲ್ ಕೆಜಿ,ಯುಕೆಜಿಯ 56 ಮಕ್ಕಳಿಗೆ ದಾನಿಗಳು ಉಚಿತವಾಗಿ ಸಮವಸ್ತ್ರ ಹಾಗೂ ಹಾಲು ಕುಡಿಯುವ ಸ್ಟಿಲ್ ಗ್ಲಾಸ್ ಗಳನ್ನು ವಿತರಣೆ ಮಾಡಿರುವದ ಮಕ್ಕಳಲ್ಲಿ ಕಲಿಕೆಯ ಉತ್ಸಾಹವನ್ನು ಇಮ್ಮಡಿಗೋಳಿಸಿದೆ. ದಾನಿಗಳಿಗೆ ಶಾಲೆಯ ಮುಖ್ಯ ಶಿಕ್ಷಕರಾದ ಕೃಷ್ಣಪ್ಪ ಹಾಗೂ ಸಹ ಶಿಕ್ಷಕಿಯರಾದ ಅನ್ನಪೂರ್ಣ, ಅನುರಾಧ, ಶಬಾನ ಸುಲ್ತಾನ್, ಶೈಲಜಾ.ಟಿ, ವನಜಾಕ್ಷಿ, ಜಮೀಲಾ ಬಾನು ಹಾಗೂ ಎಲ್ ಕೆಜಿ, ಯುಕೆಜಿ ತರಗತಿಯ ಅ.ಶಿ. ಸೀತಾ ಸುರೇಶ ಮತ್ತು ಆಯಾ ಚೈತ್ರ ಅವರು ಧನ್ಯವಾದಗಳನ್ನು ತಿಳಿಸಿದ್ದಾರೆ.




ಕರ್ನಾಟಕ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ವೈದ್ಯಕೀಯ ನೆರವು ನೀಡಲು ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯನ್ನು ಜಾರಿಗೆ ತಂದಿದೆ. ಇದರಡಿ ಸುಮಾರು 91ಕ್ಕೂ ಹೆಚ್ಚು ವರ್ಗಗಳ ಕಾರ್ಮಿಕರಿಗೆ ಉಚಿತವಾಗಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗುತ್ತದೆ. ಇದು ಅಪಘಾತ ಪರಿಹಾರ (ಮೃತಪಟ್ಟರೆ ರೂ. 1 ಲಕ್ಷ), ಅಂಗ ವೈಕಲ್ಯಕ್ಕೆ ಪರಿಹಾರ ಮತ್ತು ಆಸ್ಪತ್ರೆ ವೆಚ್ಚ ಮರು ಪಾವತಿಯನ್ನು ಒಳಗೊಂಡಿದೆ.

**ಪ್ರಮುಖ ಸೌಲಭ್ಯಗಳು ಉಚಿತ:** ಸ್ಮಾರ್ಟ್ ಕಾರ್ಡ್: ಹಮಾಲಿಗಳು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್, ಅಗಸರು, ಕ್ಷೌರಿಕರು, ಬೀದಿಬದಿ ವ್ಯಾಪಾರಿಗಳು, ಮತ್ತು ಅಲೆಮಾರಿ ಜನಾಂಗದವರಿಗೆ ಉಚಿತವಾಗಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತದೆ.

**ಅಪಘಾತ ಪರಿಹಾರ:** ಅಪಘಾತದಲ್ಲಿ ಮೃತಪಟ್ಟರೆ ರೂ.1,00,000 ಮತ್ತು ಶಾಶ್ವತ/ಭಾಗಶಃ ಅಂಗವೈಕಲ್ಯ ಉಂಟಾದರೆ ರೂ. 1,00,000 ವರೆಗೆ ಪರಿಹಾರ ಸಿಗುತ್ತದೆ.

ವೈದ್ಯಕೀಯ ನೆರವು: ಅಪಘಾತವಾದಾಗ ಆಸ್ಪತ್ರೆ ವೆಚ್ಚಕ್ಕಾಗಿ ರೂ. 50,000 ವರೆಗೆ ಮರುಪಾವತಿ ಮಾಡಲಾಗುತ್ತದೆ. ಯಾರು ಅರ್ಹರು? ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 60 ವರ್ಷಗಳ ನಡುವೆ ಇರಬೇಕು.ಆದಾಯ ತೆರಿಗೆ (Income Tax) ಪಾವತಿದಾರರಾಗಿರಬಾರದ. ಇ.ಎಸ್.ಐ (ESI) ಅಥವಾ ಇ.ಪಿ.ಎಫ್ (EPF) ಸೌಲಭ್ಯಗಳನ್ನು ಹೊಂದಿರಬಾರದು.

**ಪರಶುರಾಮ್ ಬಾಗಲವಾಡ :** ರಾಜ್ಯಾಧ್ಯಕ್ಷರು ಕರ್ನಾಟಕ ರಾಜ್ಯ ಸುರಕ್ಷಾ ಶ್ರಮಿಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಸಂಘ (ರಿ).

ದೂರವಾಣಿ ಸಂಖ್ಯೆ: 7619287649, 8105590168.

# ಸುಸ್ಥಿರ ಜೀವನದ ಭದ್ರ ಅಡಿಪಾಯಕ್ಕಾಗಿ ಸ್ತನ್ಯಪಾನ ವಿಧಾನಗಳನ್ನು ಸದೃಡಗೊಳಿಸೋಣ

ಅಮ್ಮ ಎನ್ನುವ ಆ ಕರೆಯೂ ಎನಿತು ಮಧುರವಮ್ಮ ಈ ಹಾಡು ಕೇಳಿದಾಕ್ಷಣ ಏನೋ ಒಂದು ರೀತಿಯ ಮೈ ರೋಮಾಂಚನ. ತಾಯಿ ಗರ್ಭದಿಂದಲೇ ಆರಂಭವಾದ ಈ ಸಂಬಂಧ ಮಗು ಜನಿಸಿದ ನಂತರ ಸ್ತನ್ಯಪಾನದಿಂದ ಮುಂದುವರಿಯುತ್ತೆ. ತಾಯಿ ಮಗುವಿಗೆ ಎದೆ ಹಾಲುಣಿಸುವ ಕ್ರಿಯೆ ಶತಮಾನಗಳಿಂದ ನಡೆದುಕೊಂಡು ಬಂದಿದೆ. ಇದರಲ್ಲಿ ಹೊಸತೇನೂ ಇಲ್ಲ. ಆದರೆ ನಾಗರಿಕತೆ ಬೆಳೆದಂತೆ ಸ್ತ್ರೀಯರ ಕಾರ್ಯಕ್ಷೇತ್ರವೂ ಬದಲಾಗುತ್ತಿವೆ. ಈ ಬದಲಾವಣೆಗಳು ತಾಯಿ ಮತ್ತು ಮಗುವಿನ ಸಂಬಂಧದ ಮೇಲೂ ಆಗುತ್ತಿದೆ.

ಎದೆಹಾಲು, ಪೌಷ್ಟಿಕಾಂಶವನ್ನು ಒದಗಿಸುವುದರ ಜತೆಗೆ ವಿವಿಧ ರೋಗಗಳ ವಿರುದ್ಧ ರೋಗನಿರೋಧಕ ಶಕ್ತಿಯನ್ನು ಒದತ್ತದೆ. ಇದು ಮಗುವಿಗೆ ಸುರಕ್ಷಿತ, ಸ್ವಚ್ಛ ಮತ್ತು ಅತ್ಯಂತ ಸಮತೋಲಿತ ಆಹಾರವಾಗಿದೆ. ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಪ್ರತಿ ವರ್ಷ ಆಗಸ್ಟ್ 01 ರಿಂದ ಆಗಸ್ಟ್ 07 ರವರೆಗೆ ಆಚರಿಸಲಾಗುತ್ತದೆ. ಈ ವರ್ಷದ ಥೀಮ್: ಸುಸ್ಥಿರ ಜೀವನದ ಭದ್ರ ಅಡಿಪಾಯಕ್ಕಾಗಿ ಸ್ತನ್ಯಪಾನ ಪರಿಣಾಮಕಾರಿ ವಿಧಾನಗಳನ್ನು ಸದೃಡಗೊಳಿಸೋಣ ಆಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಹೇಳುತ್ತಾರೆ. ಆಗಸ್ಟ್ 1990ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್ (ಗಟಿಜಿಅಇಈ) ಮತ್ತು ಇತರ ಆರೋಗ್ಯ ಸೇವಾ ಸಂಸ್ಥೆಗಳು ಎದೆಹಾಲು ರಕ್ಷಣೆ, ಪ್ರಚಾರ ಮತ್ತು ಬೆಂಬಲಕ್ಕಾಗಿ ಈ ಕರಡುಗೆ ಸಹಿ ಮಾಡಿ ಅನುಮೋದಿಸಿದವು. ಈ ಕಾರಣಕ್ಕಾಗಿ, ಸ್ತನ್ಯಪಾನ ಸಪ್ತಾಹವನ್ನು ಆಚರಿಸಲಾಗುತ್ತದೆ. ಸ್ತನ್ಯಪಾನದ ಪ್ರಾಮುಖ್ಯತೆ, ಇತಿಹಾಸ ಮತ್ತು ಕೆಲವು ಅಗತ್ಯ ಅಂಶಗಳ ಬಗ್ಗೆ ಮಾಹಿತಿ ಇಲ್ಲಿದೆ.

?ವಿಶ್ವ ಸ್ತನ್ಯಪಾನ ವಾರದ ಇತಿಹಾಸ: ಸ್ತನ್ಯಪಾನವನ್ನು ಬೆಂಬಲಿಸಲು ಮತ್ತು ಉತ್ತೇಜಿಸಲು 1991ರಲ್ಲಿ ವರ್ಲ್ಡ್ ಅಲೈಯನ್ಸ್ ಫಾರ್ ಬ್ರೆಸ್ಟ್ ಫೀಡಿಂಗ್ ಆಕ್ಷನ್ (ಫಂಃಂ) ಅನ್ನು ರಚಿಸಲಾಯಿತು. ಆರಂಭದಲ್ಲಿ ವರ್ಷದಲ್ಲಿ ಒಂದು ದಿನ ಸ್ತನ್ಯಪಾನ ದಿನ ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಈ ಸಮಸ್ಯೆಯು ಸಾಮಾನ್ಯ ಜೀವನ ಮತ್ತು ಮಕ್ಕಳ ಆರೋಗ್ಯದಂತಹ ಸಮಸ್ಯೆಗಳಿಗೆ ಸಂಬಂಧಿಸಿರುವುದರಿಂದ, ಅದರ ಉಪಯುಕ್ತತೆ ಮತ್ತು ಅಗತ್ಯವನ್ನು ಪರಿಗಣಿಸಿ, ಒಂದು ವಾರದ ಸಮಯವನ್ನು ನೀಡಿ ಇದನ್ನು 'ವಿಶ್ವ ಸ್ತನ್ಯಪಾನ ಸಪ್ತಾಹ' ಎಂದು ಕರೆಯಲಾಯಿತು.

ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಮೊದಲ ಬಾರಿಗೆ 1992ರಲ್ಲಿ ಆಯೋಜಿಸಲಾಯಿತು. ಸ್ತನ್ಯಪಾನವನ್ನು ಉತ್ತೇಜಿಸುವುದು ಮತ್ತು ಪ್ರಪಂಚದಾದ್ಯಂತದ ಮಕ್ಕಳ ಆರೋಗ್ಯವನ್ನು ಸುಧಾರಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಇಂದು ನೂರಕ್ಕೂ ಹೆಚ್ಚು ದೇಶಗಳು ಈ ಸಾಪ್ತಾಹಿಕ ಕಾರ್ಯಕ್ರಮದೊಂದಿಗೆ ಸಂಬಂಧ ಹೊಂದಿವೆ ಎಂದು ಪ್ರಭಾರಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಗಣೇಶ್ ಕೆ., ಅವರು ತಿಳಿಸಿದರು.

–ಮಗುವಿಗೆ ಜನ್ಮ ನೀಡುವುದು ಒಂದು ಸಂಕೀರ್ಣ ಪ್ರಕ್ರಿಯೆ. ಇದನ್ನು ಮಹಿಳೆಗೆ ಮರುಜನ್ಮವೆಂದು ಪರಿಗಣಿಸಲಾಗಿದೆ. ಮಗುವಿನ ಜನನ ತಾಯಿಗೆ ಮಧುರವಾದ ಕ್ಷಣ. ಆದರೆ ಮಗುವಿನ ಜನನದಿಂದ ಪ್ರಾರಂಭವಾಗಿ ವರ್ಷಗಳವರೆಗೆ ಅದನ್ನು ಬೆಳೆಸುವುದು ಸುಲಭವಲ್ಲ. ಅಂತಹ ಪರಿಸ್ಥಿತಿಯಲ್ಲಿ ತಾಯಿ ಅನೇಕ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲೂ ಮೊದಲ ಬಾರಿಗೆ ತಾಯಿಯಾಗುವ ಮಹಿಳೆಯರಿಗೆ ಸಮಸ್ಯೆಗಳು ಹಲವು ಪಟ್ಟು ಹೆಚ್ಚಾಗುತ್ತವೆ. ಈ ಸಮಸ್ಯೆಗಳು ಸ್ತನ್ಯಪಾನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಹ ಒಳಗೊಂಡಿರಬಹುದು.ತರಬೇತಿ ನೀಡುವುದು ಅಗತ್ಯ: ಮೊದಲ ಬಾರಿಗೆ ತಾಯಿಯಾದವರು ಸ್ತನ್ಯಪಾನದ ಬಗ್ಗೆ ಸರಿಯಾದ ಜ್ಞಾನದ ಕೊರತೆಯಿಂದಾಗಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದು ತುಂಬಾ ಸಾಮಾನ್ಯವಾಗಿದೆ.

ಸಿಂಧನೂರು ತಾಯಿ ಮಕ್ಕಳ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ ಕಾವೇರಿ ಮಾತನಾಡಿ "ಮಗು ಜನಿಸಿದ ನಂತರ ತಾಯಿಗೆ ಸರಿಯಾಗಿ ಹಾಲುಣಿಸಲು ತರಬೇತಿ ನೀಡುವುದು ಅತೀ ಅಗತ್ಯ. ಸಾಮಾನ್ಯವಾಗಿ ಮಗುವಿನ ಜನನದ ನಂತರ ಆಸ್ಪತ್ರೆಗಳಲ್ಲಿ ಹಾಜರಿರುವ ವೈದ್ಯರು ಮತ್ತು ದಾದಿಯರು ತಾಯಿಗೆ ಹಾಲುಣಿಸುವ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತಾರೆ. ಆದರೂ ಆ ಸಂದರ್ಭದಲ್ಲಿ ಕೆಲವು ತಪ್ಪುಗಳು ಕೆಲವು ಸಮಸ್ಯೆಗಳಿಗೆ ಕಾರಣವಾಗುತ್ತವೆ.

–ಸಾಮಾನ್ಯ ಸಮಸ್ಯೆಗಳಿವು: ಹಾಲುಣಿಸುವ ಮಹಿಳೆಯರಲ್ಲಿ ಕೆಲವು ಸಮಸ್ಯೆಗಳು ಸಾಮಾನ್ಯವಾಗಿ ಕಂಡುಬರುತ್ತವೆ ಎಂದು ಅವರು ಹೇಳುತ್ತಾರೆ. ಉದಾಹರಣೆಗೆ.

–ಮೊಲೆತೊಟ್ಟುಗಳ ನೋವು, ಬಿರುಕು, ಚಪ್ಪಟೆಯಾಗುವುದು ಅಥವಾ ಗುಳ್ಳೆಗಳು, ಊತ, ಎದೆ ನೋವು, ಎದೆಯ ಭಾರ, ಕಡಿಮೆ ಅಥವಾ ಹೆಚ್ಚು ಹಾಲು ಉತ್ಪಾದನೆ, ಹಾಲು ಸೋರಿಕೆ ಮತ್ತು ಮಾಸ್ಟಿಟಿಸ್ (ಸ್ತನ ಸೋಂಕು) ಇತ್ಯಾದಿ.

–ಅದೇ ಸಮಯದಲ್ಲಿ, ಮಾಸ್ಟೈಟಿಸ್ ಅಥವಾ ಇತರ ಕೆಲವು ಕಾರಣಗಳಿಂದಾಗಿ, ಸ್ತನಗಳಲ್ಲಿ ಹಾಲಿನ ಸೋಂಕಿನಂತಹ ಸಮಸ್ಯೆಗಳು ಸಹ ಉಂಟಾಗಬಹುದು.

–ಇದರಲ್ಲಿ ಜ್ವರ ಅಥವಾ ಜ್ವರ ತರಹದ ರೋಗಲಕ್ಷಣಗಳ ಜೊತೆಗೆ ಸ್ತನಗಳಲ್ಲಿ ನೋವು, ಊತ ಅಥವಾ ಉಷ್ಣತೆಯಂತಹ ಸಮಸ್ಯೆಗಳಿರಬಹುದು.

–ಮಗುವಿನ ಮೇಲೂ ಪರಿಣಾಮ: ಕೆಲವೊಮ್ಮೆ ತಾಯಿಯಲ್ಲಿ ಹಾಲುಣಿಸುವ ಸಮಸ್ಯೆಗಳು ಮಗುವಿನ ಮೇಲೂ ಪರಿಣಾಮ ಬೀರುತ್ತವೆ ಎನ್ನುತ್ತಾರೆ ಮಗುವಿಗೆ ಆರು ತಿಂಗಳಾಗುವ ಮೊದಲು ಮಹಿಳೆಗೆ ಇಂತಹ ಸಮಸ್ಯೆಗಳಿದ್ದರೆ ಮತ್ತು ಈ ಅಥವಾ ಇತರ ಕಾರಣಗಳಿಂದ ಮಗುವಿಗೆ ಅಗತ್ಯವಿರುವ ಪ್ರಮಾಣದಲ್ಲಿ ಮಗುವಿಗೆ ಹಾಲುಣಿಸಲು ಸಾಧ್ಯವಾಗದಿದ್ದರೆ, ಮಗುವಿನ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು ಎಂದು ಮಾನವಿ ತಾಯಿ ಮಕ್ಕಳ ಆಸ್ಪತ್ರೆಯ ಮಕ್ಕಳ ತಜ್ಞ ಡಾ ಶರಣಪ್ಪ ಅವರು ತಿಳಿಸಿದರು.

–ಮುನ್ನೆಚ್ಚರಿಕೆ ಕ್ರಮ ಅನುಸರಿಸಿ: ಸಮಸ್ಯೆಗಳನ್ನು ತಪ್ಪಿಸುವುದು ಹೇಗೆ? ಎಂದು ರಾಯಚೂರು ತಾಯಿ ಮಕ್ಕಳ ಆಸ್ಪತ್ರೆಯ ಮಕ್ಕಳ ತಜ್ಞೆ ಡಾ ಇಮ್ರಾನಾ ಪರ್ವೆಜ್ ಅವರು ಹೇಳಿದ್ದಾರೆ. ಮಗುವಿನ ಜನನದ ಮೊದಲು ಮತ್ತು ಹೆರಿಗೆಯ ನಂತರ ಮಹಿಳೆಗೆ ಸರಿಯಾಗಿ ಎದೆಹಾಲು ನೀಡಲು ಇತರ ಅಗತ್ಯ ಮುನ್ನೆಚ್ಚರಿಕೆಗಳ ಬಗ್ಗೆ ತಿಳಿಸುವುದು ಬಹಳ ಮುಖ್ಯ. ಅವುಗಳಲ್ಲಿ ಪ್ರಮುಖವಾದವು ಈ ಕೆಳಗಿನಂತಿವೆ.

–ಆರಾಮದಾಯಕ ಭಂಗಿಯಲ್ಲಿ ಕುಳಿತು ಮಗುವಿಗೆ ಸ್ತನ್ಯಪಾನ ಮಾಡಿಸಬೇಕು.

–ಮಗು ಹಾಲು ಕುಡಿಯುವಾಗ ಅದರ ಮೂಗನ್ನು ಒತ್ತಬಾರದು.

–ಆರಂಭದಲ್ಲಿ ಎರಡು ಬೆರಳುಗಳ ನಡುವೆ ನಿಪ್ಪಲ್ ಹಿಡಿದು ಮಗುವಿಗೆ ಹಾಲುಣಿಸಬೇಕು.

–ಸ್ತನ್ಯಪಾನ ಮಾಡಿಸುವ ಮೊದಲು ಮತ್ತು ನಂತರ ಮೊಲೆತೊಟ್ಟುಗಳನ್ನು ಸ್ವಚ್ಛಗೊಳಿಸಿ.

–ಮೊಲೆತೊಟ್ಟುಗಳನ್ನು ಯಾವಾಗಲೂ ಸ್ವಚ್ಛವಾಗಿರಿಸಿ.

–ಸ್ತನಗಳ ಮೇಲೆ ಆಲಿವ್ ಎಣ್ಣೆಯನ್ನು ಹಚ್ಚಿ. ಇದರಿಂದ ಉರಿಯೂತ ಕಡಿಮೆಯಾಗುತ್ತದೆ.

–ಸ್ತನಗಳಲ್ಲಿ ಸೌಮ್ಯವಾದ ನೋವನ್ನು ಮಸಾಜ್ ಮೂಲಕ ನಿವಾರಿಸಬಹುದು. ಆದರೆ ನೋವು ಹೆಚ್ಚಾಗಲು ಶುರುವಾದರೆ ವೈದ್ಯರನ್ನು ಸಂಪರ್ಕಿಸಿ.

–ಸ್ತನ ಪ್ಯಾಡ್‌ಗಳು ಸಹಾಯಕ:ಇದಲ್ಲದೇ ಅನೇಕ ಹಾಲುಣಿಸುವ ಮಹಿಳೆಯರಿಗೆ ಸ್ತನಗಳಿಂದ ನಿರಂತರವಾಗಿ ಹಾಲು ಸೋರಿಕೆಯ ಸಮಸ್ಯೆ ಇರುತ್ತದೆ. ಇದು ಕೆಲವೊಮ್ಮೆ ತೊಂದರೆ ಅಥವಾ



ಅವಮಾನಕ್ಕೆ ಕಾರಣವಾಗುತ್ತದೆ. ಈ ಸಂದರ್ಭದಲ್ಲಿ, ಸ್ತನ ಪ್ಯಾಡ್‌ಗಳು ತುಂಬಾ ಸಹಾಯಕವಾಗಿವೆ. ಈ ಪ್ಯಾಡ್‌ಗಳನ್ನು ಸ್ತನಗಳ ಮೇಲೆ ಮತ್ತು ಬ್ರಾ ಕಪ್‌ಗಳಲ್ಲಿ ಇಡಬೇಕು. ಅದು ಹಾಲನ್ನು ಹೀರಿಕೊಳ್ಳುತ್ತಾರೆ ಮತ್ತು ನಿಮ್ಮ ಬಟ್ಟೆಗಳು ಒದ್ದೆಯಾಗಲು ಅಥವಾ ಕಲೆಯಾಗಲು ಬಿಡುವುದಿಲ್ಲ.

ಸೋಂಕು ಅಥವಾ ಇನ್ಯಾವುದೇ ಸಮಸ್ಯೆಯ ಅಪಾಯವಿಲ್ಲ. ಬ್ರೆಸ್ಟ್ ಪ್ಯಾಡ್ ಅನ್ನು ಬಳಸುವ ಮೊದಲು ಮತ್ತು ನಂತರ ಬಿಸಿ ನೀರಿನಿಂದ ಸಂಪೂರ್ಣವಾಗಿ ಸ್ವಚ್ಛಗೊಳಿಸಬೇಕು. ಜತೆಗೆ ಸ್ತನ ಪ್ಯಾಡ್‌ಗಳ ಬಳಕೆಯಲ್ಲಿ ಸುರಕ್ಷಿತವಾಗಿರುವುದು ಅವಶ್ಯಕ. ಉದಾಹರಣೆಗೆ ಹತ್ತಿ ಪ್ಯಾಡ್‌ಗಳನ್ನು ಬಳಸುತ್ತಿದ್ದರೆ, ಪ್ಯಾಡ್ ಒದ್ದೆಯಾದಾಗ ಅವುಗಳನ್ನು ಬದಲಾಯಿಸಬೇಕು. ಏಕೆಂದರೆ ಆರ್ದ್ರ ಪ್ಯಾಡ್‌ಗಳು ಚರ್ಮದ ಸೋಂಕನ್ನು ಉಂಟುಮಾಡಬಹುದು.

–ವಿಶ್ವ ಸ್ತನ್ಯಪಾನ ಸಪ್ತಾಹದ ಉದ್ದೇಶವೇನು?: ವಾರವು ಸ್ತನ್ಯಪಾನವನ್ನು ಉತ್ತೇಜಿಸುತ್ತದೆ ಮತ್ತು ಪ್ರಪಂಚದಾದ್ಯಂತದ ಮಹಿಳೆಯರಿಗೆ ತಮ್ಮ ಶಿಶುಗಳಿಗೆ ನಿರ್ದಿಷ್ಟ ಅವಧಿಯವರೆಗೆ ಹಾಲುಣಿಸಲು ಪ್ರೋತ್ಸಾಹಿಸುತ್ತದೆ. ಮೊದಲ ಬಾರಿಗೆ ತಾಯಿಯಾದವರು ಸ್ತನ್ಯಪಾನದ ಮಹತ್ವವನ್ನು ತಿಳಿದುಕೊಳ್ಳುತ್ತಾರೆ. ನವಜಾತ ಶಿಶುಗಳಿಗೆ ಮತ್ತು ಅವರ ತಾಯಂದಿರಿಗೆ ಸ್ತನ್ಯಪಾನ ಏಕೆ ಅತ್ಯಗತ್ಯ ಎಂಬುದನ್ನು ಗುರುತಿಸುವುದು ವಿಶ್ವ ಸ್ತನ್ಯಪಾನ ಸಪ್ತಾಹದ ಉದ್ದೇಶವಾಗಿದೆ.

# ಟೀಕಾಚಾರ್ಯರ ಪ್ರತಿ ವಾಕ್ಯವೂ ಕಲ್ಪವೃಕ್ಷ ಕಾಮಧೇನು



**ಕಲಬುರಗಿ:ಆ.4:**ದ್ವೈತಸಿದ್ಧಾಂತದ ಶ್ರೀಮನ್ಮಧ್ವಾಚಾರ್ಯರ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ, 13ನೇ ಶತಮಾನದ ಯತಿವರೇಣ್ಯ, ಟೀಕಾಚಾರ್ಯರೆಂದೇ ಖ್ಯಾತರಾದ ಶ್ರೀ ಜಯತೀರ್ಥರ ಮಧ್ಯಾರಾಧನೆ ಸೋಮವಾರ ಸೇಡಂ ತಾಲೂಕಿನ ಮಳಖೇಡದಲ್ಲಿರುವ ಅವರ ಮೂಲವೃಂದಾವನ ಸನ್ನಿಧಾನದಲ್ಲಿ ಭಕ್ತಿಭಾವದೊಂದಿಗೆ ವೈಭವಯುತವಾಗಿ ನೆರವೇರಿತು.

ಮೋಡ ಕವಿದ ವಾತಾವರಣ, ವರುಣನ ಆರ್ಭಟದ ಮಧ್ಯೆಯೂ ಸಾವಿರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದ್ದರು. 'ಎದುರಾರೈ ಗುರುವೆ ನಿನಗೆ ಸಮಾನಾರೈ', ಕಾಗಿಣಿ ತಟವಾಸ ಮಳಖೇಡ ನಿವಾಸ, ಟೀಕಾಚಾರ್ಯರ ಪಾದ ಸೋಕಿದ ಕೊನೆಧೂಳಿ, ಸಾರಿ ಭಜಿಸಿರೋ ಟೀಕಾರಾಯರ ಎಂಬ ದಾಸರ ಪದಗಳನ್ನು ಹಾಡುತ್ತ ದಾಸರ ವೇಷಭೂಷಣದಲ್ಲಿ ಭಕ್ತರು ರಥೋತ್ಸವದ ಮುಂದೆ ಕುಣಿದು ಕುಪ್ಪಳಿಸಿದರು. ವಿವಿಧ ಭಜನಾ ಮಂಡಳಿಗಳ ಸದಸ್ಯರು ದಾಸರ ಪದ ಹಾಡುವ ಮೂಲಕ ರಥೋತ್ಸವಕ್ಕೆ ಮೆರಗು ತಂದುಕೊಟ್ಟರು.

ಬೆಳಿಗ್ಗೆ ಕಾಗಿಣಾ ನದಿತೀರದಲ್ಲಿ ಸುಪ್ರಭಾತ, ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರಿಂದ ದಂಡೋದಕ ಸ್ನಾನ, ಶಿಷ್ಯವೃಂದಕ್ಕೆ ಶ್ರೀಮನ್ನ್ಯಾಯಸುಧಾ ಪಾಠ, ಪಂಚಾಮೃತಾಭಿಷೇಕ, ಸಹಸ್ರಾರು ಭಕ್ತರಿಗೆ ತಪ್ತಮುದ್ರಾಧಾರಣೆ ನಡೆಯಿತು. ಪ್ರತಿವರ್ಷದಂತೆ ಸರ್ವಮೂಲಗ್ರಂಥ, ಶ್ರೀಮನ್ನ್ಯಾಯಸುಧಾ ಗ್ರಂಥ ಹಾಗೂ ಶ್ರೀಮದ್ ಟೀಕಾಕೃತ್ಪಾದರ ಪ್ರತಿಮೆಯನ್ನೊಳಗೊಂಡ ಜೋಡು ರಥೋತ್ಸವ, ಶ್ರೀಮೂಲರಾಮದೇವರ ಸಂಸ್ಥಾನ ಪೂಜೆ, ತೀರ್ಥಪ್ರಸಾದ, ಅನ್ನಸಂತರ್ಪಣೆ, ಸಂಜೆ ಪಂಡಿತರಿಂದ ಪುರಾಣ ಪ್ರವಚನ, ಭಜನೆ, ರಜತ ರಥೋತ್ಸವ, ತೊಟ್ಟಿಲು ಪೂಜೆ, ಶ್ರೀಗಳಿಂದ ಅಮೃತೋಪದೇಶ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗಿದವು.

ಮಧ್ಯಾರಾಧನೆ ಪ್ರಯುಕ್ತ ಜೋಡು ರಥೋತ್ಸವ ಸಂಭ್ರಮದಿಂದ ಜರುಗಿತು. ಸಹಸ್ರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು. ರಾಜ್ಯವೂ ಸೇರಿದಂತೆ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಗುಜರಾತ ರಾಜ್ಯಗಳಿಂದ ಅಪಾರ ಭಕ್ತ ಸಮೂಹ ಭವ್ಯ ರಥೋತ್ಸವದ ದೃಶ್ಯ ಕಣ್ತುಂಬಿಕೊಂಡರು.

ರಥಾಂಗ ಹೋಮ, ಜೋಡು ರಥೋತ್ಸವಕ್ಕೆ ಶ್ರೀಗಳು ಚಾಲನೆ ನೀಡಿದರು. ಅಪಾರ ಭಕ್ತರು ಜಯತೀರ್ಥರ ತೇರು ಎಳೆದು ಧನ್ಯರಾದರು. ಟೀಕಾರಾಯರ ಮೂಲವೃಂದಾವನದ ಪುಷ್ಪಾಲಂಕಾರ ಕಣ್ಮನ ಸೆಳೆಯಿತು. ಭಕ್ತರು ದರ್ಶನ ಪಡೆದು ಪುನೀತರಾದರು.

ಮುಂಬಯಿಯ ಶ್ರೀ ಸತ್ಯಧ್ಯಾನ ವಿದ್ಯಾಪೀಠದ ಕುಲಪತಿಗಳಾದ ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ, ಉತ್ತರಾದಿ ಮಠದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಂ. ವಿದ್ಯಾಧೀಶಾಚಾರ್ಯ ಗುತ್ತಲ್, ಶ್ರೀಮಠದ ದಿವಾನರಾದ ಪಂ. ಶಶಿಧರ ಆಚಾರ್ಯ, ಮಳಖೇಡ ಉತ್ತರಾದಿ ಮಠದ ವ್ಯವಸ್ಥಾಪಕರಾದ ಪಂ. ವೆಂಕಣ್ಣಾಚಾರ್ಯ ಕೃ. ಪೂಜಾರಿ, ಕಲಬುರಗಿಯ ಮಠಾಧಿಕಾರಿ ರಾಮಾಚಾರ್ಯ ಘಂಟಿ, ಪಂ. ವಿನೋದಾಚಾರ್ಯ ಗಲಗಲಿ ಸೇರಿದಂತೆ ಹಲವಾರು ವಿದ್ವಾಂಸರು, ಗಣ್ಯರು, ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

ಜಯತೀರ್ಥರ ಪುಸ್ತಕ ಬಿಡುಗಡೆ

ಮಳಖೇಡದ ಕಮಲಾಕರ ಕುಲಕರ್ಣಿ ರಚಿಸಿದ "ದಾಸರು ಕಂಡ ಶ್ರೀ ಜಯತೀರ್ಥರು" ಪುಸ್ತಕವನ್ನು ಶ್ರೀ ಸತ್ಯಾತ್ಮತೀರ್ಥರು ಬಿಡುಗಡೆಗೊಳಿಸಿದರು.

ನಂತರ ಆಶೀರ್ವಚನ ನೀಡಿದ ಶ್ರೀಗಳು. ಟೀಕಾಚಾರ್ಯರು ರಚಿಸಿದ ಪ್ರತಿ ವಾಕ್ಯಗಳು ಕಲ್ಪವೃಕ್ಷ ಕಾಮಧೇನುವಾಗಿವೆ. ಜಯತೀರ್ಥರು ತತ್ವ ಪ್ರಪಂಚದ ಧ್ರುವತಾರೆಯಾಗಿದ್ದಾರೆ. ಅನೇಕ ದಾಸವರೇಣ್ಯರು ಮಳಖೇಡಕ್ಕೆ ಆಗಮಿಸಿ ಜಯತೀರ್ಥರ ದರ್ಶನ ಪಡೆದು ಕೊಂಡಾಡಿದ್ದಾರೆ. ಅಂತಹ ದಾಸರು ಜಯತೀರ್ಥರನ್ನು ಕೊಂಡಾಡಿದ ಕುರಿತು ಕಮಲಾಕರ ಕುಲಕರ್ಣಿ ಅವರು ಸಂಗ್ರಹಿಸಿ ಅಕ್ಷರ ರೂಪಕೊಟ್ಟಿದ್ದಾರೆ ಎಂದರು.

ಆಚರಣೆ, ಅನುಷ್ಠಾನದಿಂದ ಸಿದ್ಧಾಂತ ಉಳಿವು

ಯಾವುದೇ ಧರ್ಮ, ಸಿದ್ಧಾಂತ ಉಳಿಯಬೇಕಾದರೆ ಆಚರಣೆ ಅನುಷ್ಠಾನಕ್ಕೆ ತರಬೇಕು ಎಂದು ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಹೇಳಿದರು. ಶ್ರೀ ಜಯತೀರ್ಥರ ಮೂಲ ಸನ್ನಿಧಾನದಲ್ಲಿ ಶ್ರೀ ಜಯತೀರ್ಥರ ಆರಾಧನಾ ಮಹೋತ್ಸವದಲ್ಲಿ ಅವರು ಆಶೀರ್ವಚನ ನೀಡಿ, ಹಿಂದೂ ಧರ್ಮ ಹಾಗೂ ಸಿದ್ಧಾಂತ ಉಳಿಸಿಕೊಳ್ಳಬೇಕಾದರೆ ನಾವು ಆಚರಣೆಗಳನ್ನುಅನುಷ್ಠಾನಕ್ಕೆ ತರಬೇಕು ಎಂದರು. ಪಾಲಕರು ಮಕ್ಕಳಿಗೆ ನಮ್ಮ ಧರ್ಮದ ಆಚರಣೆ ಕುರಿತು ಮಾಹಿತಿ ನೀಡಬೇಕು. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು, ಅಂದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಪ್ರತಿಪಾದಿಸಿದರು.

ಸುದ್ದಿ ಮತ್ತು
ಜಾಹೀರಾತಿಗಾಗಿ
ಸಂಪರ್ಕಿಸಿ
6360866626

# ಶ್ರೀ ಜಯತೀರ್ಥರ ಆರಾಧನಾ ಮಹೋತ್ಸವ



**ಸತ್ತೂರ, ಆ4:** ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ವೇದಾಂತವನ್ನು ತರ್ಕಬದ್ಧವಾಗಿ, ಸುಲಭವಾಗಿ ಹಾಗೂ ಪ್ರಾಮಾಣಿಕವಾಗಿ ಜಗತ್ತಿಗೆ ಪರಿಚಯಿಸಿದ ಮಹಾಮಹೋಪಾಧ್ಯಾಯರಲ್ಲಿ ಅಗ್ರಗಣ್ಯರು ಶ್ರೀ ಜಯತೀರ್ಥರು. ತಮ್ಮ ಅಸಾಧಾರಣ ವ್ಯಾಖ್ಯಾನ ಗ್ರಂಥಗಳಿಂದ "ಟೀಕಾಚಾರ್ಯರು" ಎಂಬ ಬಿರುದನ್ನು ಪಡೆದ ಅವರು ಮಾಧ್ವ ಸಂಪ್ರದಾಯದ ಶ್ರೇಷ್ಠ ಆಚಾರ್ಯರಲ್ಲಿ ಒಬ್ಬರಾಗಿದ್ದಾರೆ. ಅವರ ಗ್ರಂಥಗಳ ಅಧ್ಯಯನವಿಲ್ಲದೆ ದ್ವೈತ ವೇದಾಂತದ ಆಳವನ್ನು ಅರಿಯುವುದು ಕಷ್ಟವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ ಎಂದು ಡಾ. ಪಂ. ಭೀಮಸೇನ ಆಚಾರ್ಯ ಮಳಗಿಯವರು ತಿಳಿಸಿದರು.

ಸತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ಶ್ರೀನಿವಾಸ ಪಟ್ಟಣಕೋಡಿ ಅವರ ನಿವಾಸದಲ್ಲಿ ಜರುಗಿದ ಶ್ರೀ ಜಯತೀರ್ಥರ ಆರಾಧನಾ ಮಹೋತ್ಸವದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಶ್ರೀ ಜಯತೀರ್ಥರು ಕ್ರಿ.ಶ. 14ನೇ ಶತಮಾನದಲ್ಲಿ ಮಹಾರಾಷ್ಟ್ರದ ಮಂಗಳವೇಢೆ ಪ್ರದೇಶದಲ್ಲಿ ಜನಿಸಿದರು. ಬಾಲ್ಯದಿಂದಲೇ ಅವರು ಅಪೂರ್ವ ಬುದ್ಧಿಶಕ್ತಿ, ಧೈರ್ಯ ಮತ್ತು ವೈರಾಗ್ಯವನ್ನು ಹೊಂದಿದ್ದರು.ಶ್ರೀ ಜಯತೀರ್ಥರು ಸುಮಾರು 22ಕ್ಕೂ ಹೆಚ್ಚು ಮಹಾಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು: ನ್ಯಾಯಸುಧಾ, ತತ್ತ ಪ್ರಕಾಶಿಕಾ, ಪ್ರಮೇಯದೀಪಿಕಾ, ತತ್ತ ಸಂಖ್ಯಾನ ಟೀಕೆ, ವಿಷ್ಣುತತ್ತ ವಿನಿರ್ಣಯ ಟೀಕೆ, ಉಪಾಧಿಖಂಡನ, ಮಾಯಾವಾದಖಂಡನ. ಇವುಗಳಲ್ಲಿ ನ್ಯಾಯಸುಧಾ ದ್ವೈತ ವೇದಾಂತದ ಅತ್ಯಂತ ಶ್ರೇಷ್ಠ ವ್ಯಾಖ್ಯಾನ ಗ್ರಂಥವೆಂದು ಪರಿಗಣಿಸಲ್ಪಡುತ್ತದೆ.

ಕಾರ್ಯಕ್ರಮದ ಪೂರ್ವದಲ್ಲಿ ಬಳಗದ ಸದಸ್ಯರಿಂದ ಶ್ರೀ ಹರಿ ವಾಯು ಗುರುಗಳ ಸ್ತೋತ್ರಗಳ ಪಾರಾಯಣ ಜರುಗಿತು. ರಘೋತ್ತಮ ಅವಧಾನಿ, ಕೃಷ್ಣ ಹುನಗುಂದ, ಡಾ, ರವಿ ಧುಮ್ಮವಾಡ, ಡಾ. ಶ್ರೀನಾಥ, ಹನುಮಂತ ಪುರಾಣಿಕ, ಪಾಂಡುರಂಗ ಕುಲಕರ್ಣಿ, ಆನಂದ ದೇಶಪಾಂಡೆ, ಕೇಶವ ಕುಲಕರ್ಣಿ, ಸಂಜೀವ ಗೋಳಸಂಗಿ, ಗಿರೀಶ್ ಶಿರೋಳ, ವಿಠಲ ಅಂಬೇಕರ, ಉದಯ ದೇಶಪಾಂಡೆ, ಎಲ್.ವಿ.ಜೋಶಿ, ಭೀಮಸೇನ್ ದಿಗ್ಗಾವಿ, ರಾಘವೇಂದ್ರ ಮುಂಡಗೋಡ, ರಂಗನಾಥ ಕಟ್ಟಿ, ರಮೇಶ್ ಅಣ್ಣಿಗೇರಿ, ಗಿರೀಶ್ ಪಾಟೀಲ್, ಬದರಿನಾಥ ಬೆಟಗೇರಿ, ಎಸ್.ಎಂ.ಜೋಶಿ ಉಪಸ್ಥಿತರಿದ್ದರು.

# ಗಂಗನಪಳ್ಳಿ ಸಹೋದರರ ಸಾಹಿತ್ಯ ಪರಂಪರೆ ಯುವಪೀಳಿಗೆಗೆ ಪ್ರೇರಣೆ : ಡಾ.ಎಂ.ಜಿ ದೇಶಪಾಂಡೆ



**ಬೀದರ್ ಅ 04:** ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ ಎಂ.ಜಿ. ಗಂಗನಪಳ್ಳಿ ಅವರು ಸಾಹಿತ್ಯ ಲೋಕದಲ್ಲಿ ಅಜರಾಮರ ಸ್ಥಾನ ಗಳಿಸಿದ್ದರು. ತಮ್ಮ ಇಡೀ ಜೀವನವನ್ನು ಸಾಹಿತ್ಯ ಸೇವೆಗೆ ಮೀಸಲಿಟ್ಟ ಅವರು ಜೀವನಪೂರ್ತಿ ಬ್ರಹ್ಮಚಾರಿಯಾಗಿ ಸಾಹಿತ್ಯ ರಚನೆ, ಚಿಂತನೆ ಹಾಗೂ ಕನ್ನಡದ ಬೆಳವಣಿಗೆಗೆ ಅನನ್ಯ ಕೊಡುಗೆ ನೀಡಿದರು. ಅವರು ನಿಜಕ್ಕೂ ಸಾಹಿತ್ಯ ಧ್ರುವತಾರೆಯಾಗಿದ್ದರು. ಅವರ ಗೌರವಾರ್ಥ ಪ್ರಕಟಗೊಂಡ 'ಭಾವಗಂಗೆ' ಅಭಿನಂದನ ಗ್ರಂಥವೇ ಅವರ ಸಾಹಿತ್ಯ ಸಾಧನೆಗೆ ಸಾಕ್ಷಿಯಾಗಿದೆ ಎಂದು ಹಿರಿಯ ಸಾಹಿತಿ ಎಂ.ಜಿ ದೇಶಪಾಂಡೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಭಾನುವಾರ ಸಾಯಂಕಾಲ ಜನಪರ ಸಾಂಸ್ಕೃತಿಕ ಪ್ರತಿಷ್ಠಾನ, ಬೀದರ ಹಾಗೂ ಗಂಗನಪಳ್ಳಿ ಪರಿವಾರ, ಸಿಕ್ಕಿಂದ್ರಾಪೂರ ಇವರ ಸಂಯುಕ್ತಾಶ್ರಯದಲ್ಲಿ ಹೆಸರಾಂತ ಆಶುಕವಿ ದಿವಂಗತ ಎಂ.ಜಿ. ಗಂಗನಪಳ್ಳಿ ಹಾಗೂ ಸಾಹಿತಿ ದಿವಂಗತ ರಾಮರಾವ ಗಂಗನಪಳ್ಳಿ ಅವರ ಸ್ಮರಣಾರ್ಥ ಪ್ರಶಸ್ತಿ ಪ್ರದಾನ, ಉಪನ್ಯಾಸ ಮತ್ತು ಕವಿಗೋಷ್ಠಿ ಕಾರ್ಯಕ್ರಮವು ನಗರದ ಶ್ರೀ ಕೃಷ್ಣ ದರ್ಶಿನಿ ಉಡುಪಿ ಹೋಟೆಲ್‌ನ ಮಹಾಲಕ್ಷ್ಮೀ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ದಿವಂಗತ ಎಂ.ಜಿ ಗಂಗನಪಳ್ಳಿ, ಹಾಗೂ ರಾಮರಾವ ಗಂಗನಪಳ್ಳಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಜ್ಯೋತಿ ಬೆಳೆಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಅವರ ಸಹೋದರರಾದ ರಾಮರಾವ ಗಂಗನಪಳ್ಳಿ ಅವರೂ ಶ್ರೇಷ್ಠ ಸಾಹಿತಿ, ನ್ಯಾಯವಾದಿ ಹಾಗೂ ಬ್ಯಾಂಕ್ ಉದ್ಯೋಗಿಯಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಮತ್ತು ಸಮಾಜಮುಖಿ ಚಟುವಟಿಕೆಗಳ ಮೂಲಕ ಇಬ್ಬರೂ ಸಹೋದರರು ಕನ್ನಡ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇಂದು ಅವರು ನಮ್ಮೊಂದಿಗಿಲ್ಲದಿರುವುದು ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಆದರೆ ಅವರ ಆದರ್ಶಗಳು, ಆಚಾರ ವಿಚಾರಗಳು ಮತ್ತು ಸಾಹಿತ್ಯ ಕೃತಿಗಳು ಜನಮಾನಸದಲ್ಲಿ ಸದಾ ಜೀವಂತವಾಗಿದ್ದು, ಅವರು ಚಿರಸ್ಮರಣೀಯರಾಗಿರುತ್ತಾರೆ ಎಂದು ಅವರು ಹೇಳಿದ್ದಾರೆ.

ಜನಪರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಚಾಲಕ ಡಾ. ಸಂಜೀವಕುಮಾರ ಅತಿವಾಳೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಂ.ಜಿ. ಗಂಗನಪಳ್ಳಿ ಅವರ ಸ್ಮರಣಾರ್ಥ 'ಭಾವಗಂಗೆ' ಅಭಿನಂದನ ಗ್ರಂಥವನ್ನು ಕೇವಲ ಆರು ತಿಂಗಳ ಅವಧಿಯಲ್ಲಿ ಸಮಗ್ರ ಮಾಹಿತಿ ಸಂಗ್ರಹಿಸಿ ಸಿದ್ಧಪಡಿಸಿ ಪ್ರಕಟಿಸಲಾಗಿದೆ. ಸುಮಾರು 360 ಪುಟಗಳ ಈ ಗ್ರಂಥದಲ್ಲಿ ರಾಜ್ಯದ ವಿವಿಧ ಭಾಗಗಳ ಕವಿಗಳು, ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರ ಲೇಖನಗಳು ಮತ್ತು ಗಂಗನಪಳ್ಳಿ ಅವರ ಸಾಹಿತ್ಯ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿಯೂ ಗಂಗನಪಳ್ಳಿ ಕುಟುಂಬದೊಂದಿಗೆ ಕೈಜೋಡಿಸಿ ಅವರ ಹೆಸರಿನಲ್ಲಿ ಇನ್ನಷ್ಟು ಪ್ರಶಸ್ತಿಗಳು, ಸಾಹಿತ್ಯ ಸಂಕಿರಣಗಳು, ವಿಚಾರಗೋಷ್ಠಿಗಳು ಹಾಗೂ ವಿವಿಧ ಸಾಹಿತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಅವರ ಆದರ್ಶಗಳು ಮತ್ತು ಸಾಹಿತ್ಯ ಸೇವೆ ಯುವಪೀಳಿಗೆಗೆ ತಲುಪುವಂತೆ ಕಾರ್ಯನಿರ್ವಹಿಸುವುದರ ಜೊತೆಗೆ ಹೊಸ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಕಾರ್ಯವನ್ನು ಜನಪರ ಸಾಂಸ್ಕೃತಿಕ ಪ್ರತಿಷ್ಠಾನ ನಿರಂತರವಾಗಿ ಮಾಡಲಿದೆ ಎಂದು ತಿಳಿಸಿದರು.

ನಿವೃತ್ತ ಅಧಿಕಾರಿ ಎಂ.ಎಸ್.ಕಟಗಿ ಮಾತನಾಡಿ, ಜೀವನ ಎನ್ನುವುದು ಒಂದು ಪುಸ್ತಕದ ಪುಟದಂತಿದೆ. ಹುಟ್ಟು ಸಹಜ, ಸಾವು ಖಚಿತ. ಈ ಎರಡರ ನಡುವಿನ ಅವಧಿಯಲ್ಲೇ ಮನುಷ್ಯ ತನ್ನ ಬದುಕಿನ ಅರ್ಥವನ್ನು ಕಂಡುಕೊಳ್ಳಬೇಕು. ಆಶುಕವಿ ಎಂ.ಜಿ. ಗಂಗನಪಳ್ಳಿ ಅವರು 'ಸಾಲವಿಲ್ಲದ ಬದುಕು, ರೋಗವಿಲ್ಲದ ಶರೀರ' ಎಂಬ ಆದರ್ಶವನ್ನು ಪಾಲಿಸಿಕೊಂಡು ಸರಳ, ಶಿಸ್ತುಬದ್ಧ ಹಾಗೂ ಮೌಲ್ಯಯುತ ಜೀವನ ನಡೆಸಿದರು.

ಎಂ.ಜಿ. ಗಂಗನಪಳ್ಳಿ ಹಾಗೂ ರಾಮರಾವ ಗಂಗನಪಳ್ಳಿ ಸಹೋದರರು ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಮುಖಿ ಚಟುವಟಿಕೆಗಳ ಮೂಲಕ ಬೀದರ ಜಿಲ್ಲೆಯ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಸೇವೆ ಮತ್ತು ಸಾಧನೆ ಇಂದಿನ ಪೀಳಿಗೆಗೆ ಆದರ್ಶವಾಗಿದ್ದು, ಅವರ ಸ್ಮರಣೆ ಸದಾ ಚಿರಸ್ಥಾಯಿಯಾಗಿರಲಿದೆ, ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಸದ್ಭಾವನಾ ಮಂಚ್ ಅಧ್ಯಕ್ಷ ಗುರುನಾಥ ಗಡ್ಡೆ ಹಾಗೂ ಸಮಗ್ರ ಶಿಕ್ಷಣ ಕರ್ನಾಟಕದ ಸಹಾಯಕ ಯೋಜನಾ ಸಮನ್ವಯಾಧಿಕಾರಿ ಪ್ರತಿಭಾ ಮೆಂಚ್, ಜಾಲಿಂದರ ಗಂಗನಪಳ್ಳಿ, ಅಶೋಕ ಗಂಗನಪಳ್ಳಿ, ಡಾ. ದತ್ತಪ್ರಸಾದ ಗಂಗನಪಳ್ಳಿ, ವೇದಿಕೆ ಮೇಲೆ ಉಪಸ್ಥಿತರಿದ್ದು, ಗಂಗನಪಳ್ಳಿ ಅವರ ಸಾಹಿತ್ಯ, ಸಾಮಾಜಿಕ ಚಿಂತನೆ ಹಾಗೂ ಕನ್ನಡ ನಾಡು ನುಡಿಗೆ ಅವರು ಸಲ್ಲಿಸಿದ ಕೊಡುಗೆಯನ್ನು ಸ್ಮರಿಸಿದರು.

ಹಿರಿಯ ಸಾಹಿತಿ ರಮೇಶ ಬಿರಾದಾರ ಅವರು ಎಂ.ಜಿ. ಗಂಗನಪಳ್ಳಿ ಅವರ ಬದುಕು ಮತ್ತು ಸಾಹಿತ್ಯ ವಿಷಯದ ಕುರಿತು ಉಪನ್ಯಾಸ ನೀಡಿ, ಅವರ ಸಾಹಿತ್ಯಿಕ ಸಾಧನೆ ಹಾಗೂ ಆಶುಕವಿತ್ವದ ವೈಶಿಷ್ಟಗಳನ್ನು ವಿವರಿಸಿದರು. ಅಖಿಲ ಭಾರತ ದಾಸ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರವೀಂದ್ರ ಲಂಜವಾಡಕರ್ ಅವರು ರಾಮರಾವ ಗಂಗನಪಳ್ಳಿ ಅವರ ಬದುಕು ಮತ್ತು ಸಾಹಿತ್ಯ ವಿಷಯವಾಗಿ ಉಪನ್ಯಾಸ ನೀಡಿ, ಅವರ ಸಾಹಿತ್ಯ ಸೇವೆ ಹಾಗೂ ಸಾಮಾಜಿಕ ಬದ್ಧತೆಯನ್ನು ಮೆಲುಕು ಹಾಕಿದರು. ಉಘಣಂಡಿಥಿ

ಕಾರ್ಯಕ್ರಮದಲ್ಲಿ ಶಂಭುಲಿಂಗ ವಾಲ್ದೊಡ್ಡಿ, ಹಾಗೂ ರೇಣುಕಾ ಎನ್.ಬಿ. ಅವರು ಗಂಗನಪಳ್ಳಿ ಅವರ ಕಾವ್ಯಗಳನ್ನು ಗಾಯನದ ಮೂಲಕ ಪ್ರಸ್ತುತಪಡಿಸಿದರು.

ಈ ಸಂದರ್ಭದಲ್ಲಿ ಎಂ.ಜಿ. ಗಂಗನಪಳ್ಳಿ ಕಾವ್ಯ ಪ್ರಶಸ್ತಿಯನ್ನು ಹಿರಿಯ ಸಾಹಿತಿ ಮಾಣಿಕ ನೇಳಗೆ ಅವರಿಗೆ ಹಾಗೂ ರಾಮರಾವ ಗಂಗನಪಳ್ಳಿ ಉದಯೋನ್ಮುಖ ಬರಹಗಾರ ಪ್ರಶಸ್ತಿಯನ್ನು ಸಾಹಿತಿ ಹಾಗೂ ಶಿಕ್ಷಕಿ ಸುನೀತಾ ಬಿರಾದಾರ ಅವರಿಗೆ ಪ್ರದಾನ ಮಾಡಿ ತಲಾ 5 ಸಾವಿರ ನಗದು ಬಹುಮಾನ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಪ್ರಾರಂಭದಲ್ಲಿ ಜಾಲಿಂದರ ಗಂಗನಪಳ್ಳಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು, ಡಾ. ಸುನೀತಾ ಬಿಕ್ಲೆ ನಿರೂಪಿಸಿದರೆ, ಡಾ. ದತ್ತಪ್ರಸಾದ ಗಂಗನಪಳ್ಳಿ ವಂದಿಸಿದರು.

ಬಳಿ ನಡೆದ ಕವಿಗೋಷ್ಠಿಯಲ್ಲಿ ಎಸ್.ಎಸ್. ದೊಡಮನಿ, ಉಮಾಕಾಂತ ಮೀಸೆ, ಮಲ್ಲಿಕಾರ್ಜುನ ಮುಂಡಾಸೆ, ಮುರಳಿನಾಥ ಮೇತ್ರೆ, ಡಾ. ಗೌತಮ ಸಂಗಣ್ಣೂರ್, ಶ್ರೀದೇವಿ ಪಾಟೀಲ್, ಸಿದ್ದಮ್ಮ ಬಸವಣ್ಣೂರ್, ಸರಿತಾ ಬೇಬಿ, ಹಾಗೂ ಆತ್ಮನಂದ ಬಂಬುಳಗಿ, ಸೇರಿದಂತೆ ಅನೇಕ ಕವಿಗಳು ತಮ್ಮ ಕವನಗಳನ್ನು ವಾಚಿಸಿ ಮೆಚ್ಚುಗೆ ಗಳಿಸಿದರು.

ಕಾರ್ಯಕ್ರಮದಲ್ಲಿ ಜನಪರ ಸಾಂಸ್ಕೃತಿಕ ಪ್ರತಿಷ್ಠಾನದ ಪದಾಧಿಕಾರಿಗಳು, ಸಾಹಿತ್ಯಾಸಕ್ತರು, ಕವಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಮೊದಲಬಾರಿಗೆ ಸಚಿವಸ್ಥಾನ– ಡಾ. ಅಜಯ್ ಸಿಂಗ್ ಸಂತಸ



**ಕಲಬುರಗಿ:**ಮೊದಲ ಬಾರಿಗೆ ಸಚಿವಸ್ಥಾನ ದೊರಕಿರುವ ಸಂಭ್ರಮದಲ್ಲಿರುವ ಡಾ. ಅಜಯ್ ಧರ್ಮಸಿಂಗ್ ಅವರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರು, ರಾಜ್ಯ ನಾಯಕರು, ಜೇವರ್ಗಿ ಜನತೆಗೆ ಧನ್ಯವಾದ ತಿಳಿಸಿದ್ದಾರೆ.

ಹೇಳಿಕೆ ನೀಡಿರುವ ಡಾ. ಅಜಯ್ ಸಿಂಗ್ ಅವರು ರಾಷ್ಟ್ರೀಯ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಡಾ. ಮಲ್ಲಿಕಾರ್ಜುನ ಖರ್ಗೆ, ರಣದೀಪಸಿಂಗ್ ಸುರ್ಜೇವಾಲ್, ಕೆಸಿ ವೇಣುಗೋಪಾಲ್, ರಾಜ್ಯ ಕೆಪಿಸಿಸಿ ಅಧ್ಯಕ್ಷರಾದ ಬಿಕೆ ಹರಿಪ್ರಸಾದ್, ಸಿಎಂ ಡಿಕೆ ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಕಲಬುರಗಿ ಜನತೆ, ಯಡ್ರಾಮಿ ಸೇರಿದಂತೆ ಜೇವರ್ಗಿ ಮತಕ್ಷೇತ್ರದ ಸರ್ವ ಜನತೆಗೂ ಧನ್ಯವಾದಗಳನ್ನು ತಿಳಿಸೋದಾಗಿ ಹೇಳಿದ್ದಾರೆ.

ತಮ್ಮ ತಂದೆಯವರಾದ ದಿ. ಧರಂಸಿಂಗ್, ತಾಯಿಯವರಾದ ಪ್ರಭಾತಿ ಧರ್ಮಸಿಂಗ್, ಬಧುಗಲಿಗೆಲ್ಲರಿಗೂ ಈ ಸಂದರ್ಭದಲ್ಲಿ ಧನ್ಯವಾದ ಹೇಳಿರುವ ಡಾ. ಅಜಯ್ ಸಿಂಗ್ ಪಕ್ಷ ಕೊಟ್ಟಿರುವ ಜವಾಬ್ದಾರಿ ಗುರುತರವಾಗಿದ್ದು ಅದನ್ನು ಬರುವ ದಿನಗಳಲ್ಲಿ ಸಮರ್ಥವಾಗಿ ನಿಭಾಯಿಸೋದಾಗಿ ಹೇಳಿದ್ದಾರೆ.

# ಹುಮನಾಬಾದ್ ಗುರುಗಂಗಾ ಹಳ್ಳ ವಿಷಕಾರಿ ತ್ಯಾಜ್ಯ : ಕಾರ್ಖಾನೆ ವಿರುದ್ಧ ಬೃಹತ್ ಪ್ರತಿಭಟನೆ



**ಹುಮನಾಬಾದ್:** ಹೊರವಲಯದ ಕೈಗಾರಿಕೆ ಪ್ರದೇಶದ ರಾಸಾಯನಿಕ ಕಂಪನಿಗಳಿಂದ ಮಾಣಿಕನಗರ ಪವಿತ್ರ ಗುರುಗಂಗಾ ಹಳ್ಳಕ್ಕೆ ಸೇರುತ್ತಿರುವ ವಿಷಕಾರಿ ತ್ಯಾಜ್ಯವನ್ನು ಶಾಶ್ವತವಾಗಿ ತಡೆಗಟ್ಟುವಂತೆ ಒತ್ತಾಯಿಸಿ ಶ್ರೀ ಮಾಣಿಕಪ್ರಭು ಸಂಸ್ಥಾನದ ಕಾರ್ಯದರ್ಶಿ ಆನಂದರಾಜ ಪ್ರಭು ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಶ್ರೀ ಮಾಣಿಕ ನಗರ ಸಂಸ್ಥಾನದಿಂದ ಆರಂಭವಾದ ಬೃಹತ್ ಪ್ರತಿಭಟನೆಯು ತಹಸೀಲ್ ಕಚೇರಿವರೆಗೆ ನಡೆಯಿತು. ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಗ್ರಾಮಗಳ ಜನರು ಪಾಲ್ಗೊಂಡಿದ್ದರು. ಕೈಯಲ್ಲಿ ಕಪ್ಪು ಧ್ವಜ ಹಿಡಿದ ಪ್ರತಿಭಟನಾಕಾರರು 'ಪ್ರದೂಷಣ ತಡೆಸಿ–ಗುರುಗಂಗಾ ಉಳಿಸಿ' ಎಂಬ ಘೋಷಣೆಯೊಂದಿಗೆ ಕಾರ್ಖಾನೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು

ಹುಮನಾಬಾದ್ ಕ್ಷೇತ್ರದ ಶಾಸಕ ಡಾ. ಸಿದ್ದು ಪಾಟೀಲ್, ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್ ಅವರು ಪ್ರತಿಭಟನೆಗೆ ಬೆಂಬಲಿಸಿ ಭಾಗಿಯಾದರು. ಬಳಿಕ ತಹಸೀಲ್ದಾರ್ ಅವರಿಗೆ ಪತ್ರ ಸಲ್ಲಿಸಿದರು.

ಬಳಿಕ ಪ್ರಮುಖರು ಮಾತನಾಡಿ, "ಕಳೆದ ಸುಮಾರು ಒಂದು ದಶಕದಿಂದ ಹುಮನಾಬಾದ್ ಕೈಗಾರಿಕಾ ಪ್ರದೇಶದ ಸುತ್ತಮುತ್ತಲಿನ ಕೆಲವು ಕೈಗಾರಿಕೆಗಳಿಂದ ಸಂಸ್ಕರಿಸದ ವಿಷಕಾರಿ ಕೈಗಾರಿಕಾ ತ್ಯಾಜ್ಯವನ್ನು ಗುರುಗಂಗಾ ಹಳ್ಳಕ್ಕೆ ಅಕ್ರಮವಾಗಿ ಹರಿಸಲಾಗುತ್ತಿದೆ. ಇದರಿಂದ ಹಳ್ಳದ ನೀರು ಕಪ್ಪು ಬಣ್ಣಕ್ಕೆ ತಿರುಗಿದ್ದು, ದುರ್ವಾಸನೆ, ತೈಲಯುಕ್ತ ಪದರ ನಿರ್ಮಾಣ ಹಾಗೂ ಜಲಚರಗಳ ಸಾವಿನಂತಹ ಆತಂಕಕಾರಿ ಪರಿಸ್ಥಿತಿ ಉಂಟಾಗಿದೆ" ಎಂದು ಆತಂಕ ವ್ಯಕ್ತಪಡಿಸಿದರು.

ಈ ಮಾಲಿನ್ಯವು ಭೂಗರ್ಭಜಲಕ್ಕೂ ವ್ಯಾಪಿಸಿದ್ದು, ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಗ್ರಾಮಗಳಾದ ಮಾಣಿಕನಗರ, ಹುಮನಾಬಾದ್, ಗಡವಂತಿ, ಮೊಳಕೇರಾ, ಧುಮ್ಮನ್‌ಸೂರು ಸೇರಿದಂತೆ ಸುತ್ತಮುತ್ತಲಿನ ಸಾವಿರಾರು ಜನರು ಅವಲಂಬಿಸಿರುವ ಕುಡಿಯುವ ನೀರಿನ ಮೂಲಕ್ಕೆ ಗಂಭೀರ ಅಪಾಯ ಎದುರಾಗಿದೆ. ಇದರಿಂದ ಸಾರ್ವಜನಿಕರು ಚರ್ಮರೋಗ, ಜೀರ್ಣಾಂಗದ ಸೋಂಕು, ಯಕೃತ್ ಹಾಗೂ ಮೂತ್ರಪಿಂಡದ ಸಮಸ್ಯೆ, ನರಮಂಡಲದ ತೊಂದರೆಗಳು ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಸಾಧ್ಯತೆ ಇದೆ ಎಂದರು. ಡಿಜಿಟಲ್ಪತ್ರಿಕೆ

ಪ್ರತಿವರ್ಷ ಲಕ್ಷಾಂತರ ಭಕ್ತರು ಮಾಣಿಕನಗರಕ್ಕೆ ಆಗಮಿಸಿ ಗುರುಗಂಗಾ ಹಾಗೂ ವಿರಜಾ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿ ತೀರ್ಥ ಸ್ವೀಕರಿಸುವ ಹಿನ್ನೆಲೆ, ಈ ಮಾಲಿನ್ಯವು ಪರಿಸರ ಹಾಗೂ ಸಾರ್ವಜನಿಕ ಆರೋಗ್ಯದ ಸಮಸ್ಯೆಯಷ್ಟೇ ಅಲ್ಲದೆ ಲಕ್ಷಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೂ ಧಕ್ಕೆ ಉಂಟುಮಾಡುತ್ತಿದೆ. ಕ್ಯಾನ್ಸರ್ ಸೇರಿದಂತೆ ಅಪಾಯಕಾರಿ ಕಾಯಿಲೆಗಳು ಸಂಭವಿಸುವ ಆತಂಕ ಕಾಡುತ್ತಿದೆ ಎಂದರು.

ಈ ಪ್ರಕರಣವನ್ನು ತುರ್ತು ಆದ್ಯತೆಯ ಮೇರೆಗೆ ಪರಿಗಣಿಸಿ, ಸಂಬಂಧಿತ ಇಲಾಖೆಗಳ ಮೂಲಕ ಸಮಗ್ರ ತನಿಖೆ ನಡೆಸಿ, ಮಾಲಿನ್ಯದ ಮೂಲವನ್ನು ಪತ್ತೆಹಚ್ಚಿ, ತಪ್ಪಿತಸ್ಥ ಕೈಗಾರಿಕೆಗಳ ವಿರುದ್ಧ ಪರಿಸರ ಕಾನೂನುಗಳ ಅಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಜೊತೆಗೆ ಪವಿತ್ರ ಗುರುಗಂಗಾ ಹಳ್ಳಕ್ಕೆ ಕೈಗಾರಿಕಾ ತ್ಯಾಜ್ಯ ಸೇರುವುದನ್ನು ಶಾಶ್ವತವಾಗಿ ತಡೆಗಟ್ಟಲು ಪರಿಣಾಮಕಾರಿ ವ್ಯವಸ್ಥೆಯನ್ನು ತುರ್ತಾಗಿ ಜಾರಿಗೆ ತರಬೇಕು ಎಂದು ಆಗ್ರಹಿಸಲಾಗಿದೆ.

ಸೇರಿದಂತೆ ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು, ಮಾಣಿಕ ಸಂಸ್ಥಾನದ ಭಕ್ತಾದಿಗಳು ಪಾಲ್ಗೊಂಡಿದ್ದರು.

ಈ ಕುರಿತು ಮುಂದಿನ 72 ಗಂಟೆಗಳೊಳಗೆ ಸ್ಪಷ್ಟ ಹಾಗೂ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು. ನಿಗದಿತ ಅವಧಿಯೊಳಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ಈ ಜನಹಿತ ಹೋರಾಟವು ಮಾಣಿಕನಗರಕ್ಕೆ ಮಾತ್ರ ಸೀಮಿತವಾಗದೆ ಮಾಲಿನ್ಯದಿಂದ ಬಾಧಿತವಾಗಿರುವ ಎಲ್ಲ ಪ್ರದೇಶಗಳ ಜನರನ್ನು ಒಳಗೊಂಡ ಬೃಹತ್ ಸಾರ್ವಜನಿಕ ಹೋರಾಟವಾಗಿ ರೂಪುಗೊಳ್ಳಲಿದೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದ್ದಾರೆ.

# ತಾಲೂಕಾಮಟ್ಟದ ಚಿತ್ರಕಲಾ ಸ್ಪರ್ಧೆ ಉದ್ಘಾಟನೆ



**ಬಾದಾಮಿ,ಆ4:** ನಮಗೆ ಜೀವಿಸಲು ಭೂಮಿ ಸಂರಕ್ಷಣೆ ಅತ್ಯಗತ್ಯವಾಗಿ ನಮ್ಮ ಜೀವನ ಕ್ರಮ ವನ್ನು ಬದಲಿಸಿಕೊಂಡು ಜೀವ ಜಲ ನೀರನ್ನು ಮಿತವಾಗಿ ಬಳಸುವಲ್ಲಿ ಯುವಕರ ಪಾತ್ರ ಮಹತ್ತರವಾದುದು ವಿದ್ಯಾರ್ಥಿ ಜೀವನದಿಂದಲೇ ನಮ್ಮ ಭೂಮಿ, ನಮ್ಮ ನೀರು ನಮ್ಮ ಶಕ್ತಿಯನ್ನು ಸದ್ವಿನಿಯೋಗ ಮಾಡಿಕೊಳ್ಳಲು ಪ್ರೇರಣೆ ನೀಡಲು ಇಂತಹ ಕಾರ್ಯಕ್ರಮಗಳು ಅನುಕೂಲಕರ ಎಂದು ಬಾದಾಮಿ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಹೇಳಿದರು.

ಅವರು ನಗರದ ಶಾಸಕರ ಸರಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ತಾಲೂಕಾಮಟ್ಟದ ಚಿತ್ರ ಕಲಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾ ಅಂತರ್ಜಲ ಕಚೇರಿ ಹಾಗೂ ನಿರಾಣಿ ಶುಗರ್ಸ್ ಲಿಮಿಟೆಡ್ ಘಟಕ –5 ಹಾಗೂ ಶಾಲಾ ಶಿಕ್ಷಣ ಇಲಾಖೆ, ಬಾದಾಮಿ ಇವರ ಸಹಯೋಗದಲ್ಲಿ ಶಾಸಕರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ. ಬಾದಾಮಿ ಇಲ್ಲಿ ಈ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಮಕ್ಕಳು ವಿಯಕ್ಕೆ ಅನುಗುಣವಾಗಿ ಚಿತ್ರವನ್ನು ಸ್ಮರಣೆಯಿಂದ ಬಿಡಿಸಿ ವಿಜೇತರಾಗುವಂತೆ ಶುಭಾಶಯಗಳನ್ನು ತಿಳಿಸಿದರು. ಪ್ರಶಸ್ತಿಯನ್ನು ತಾಲೂಕು ಹಂತದ ಸ್ವಾತಂತ್ರ್ಯ ದಿನಾಚರಣೆಯ ಸಮಯದಲ್ಲಿ ಪ್ರಥಮ–5001 ದ್ವಿತೀಯ :–2001 ತೃತೀಯ –1001 ನಗದು ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಸಹಾಯಕ ವ್ಯವಸ್ಥಾಪಕ ಎಚ್.ಯು.ಮಜ್ಜಗಿ ಇವರು ತಿಳಿಸಿದರು. ಕಾರ್ಯಕ್ರಮವನ್ನು ಶಿಕ್ಷಣ ಸಂಯೋಜಕ ಬಿ.ಟಿ.ಹಳ್ಳಿ ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ದೈಹಿಕ ಶಿಕ್ಷಣ ಪರಿವಿಕ್ಷಣಾಧಿಕಾರಿ ಬಿ ಎಚ್ ಹಳಗೇರಿ, ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಗಂಗಾಧರ ಬಡಿಗೇರ ನಿರ್ಣಾಯಕರಾದ ಕೇಶವ ರಾಠೋಡ್, ವಿ ಎನ್ ಪಕಾಲಿ, ಕೇಶವ ರಘುವೀರ ಚಿತ್ರ ಕಲಾ ಶಿಕ್ಷಕರು ಉಪಸ್ಥಿತರಿದ್ದರು.

# ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಚವ್ಹಾಣ ಶಂಕುಸ್ಥಾಪನೆ



**ಔರಾದ್ :ಆ.4:** ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಶಾಸಕ ಪ್ರಭು ಬಿ.ಚವ್ಹಾಣ ಅವರು ಸಂಚರಿಸಿ ಸುಮಾರು 4 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಔರಾದ(ಬಿ), ಲಾಲಸಿಂಗ್ ತಾಂಡಾ (ಹಲ್ಯಾಳ), ಗೋಪಿನಾಯಕ್ ತಾಂಡಾ (ಮೆಡಪಳ್ಳಿ), ಪೊಮಾ ತಾಂಡಾ (ಜಂಬಗಿ), ಏಕನಾಥ ತಾಂಡಾ, ರಾಂಪೂರ ತಾಂಡಾ, ಗುರುನಾಥ ತಾಂಡಾ, ಕಂದಗೂಳ, ಬೇಲೂರು (ಎನ್) ಹಾಗೂ ಧರಿ ಹನುಮಾನ ಮಂದಿರ ಸೇರಿದಂತೆ ವಿವಿಧೆಡೆ ರಸ್ತೆ, ಸಿಸಿ ರಸ್ತೆ, ಸಮುದಾಯ ಭವನ, ಕುಡಿಯುವ ನೀರು ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ಎಕಂಬಾದಲ್ಲಿನ ಬಾಲಕಿಯರ ಪ್ರೌಢ ಶಾಲೆಯಲ್ಲಿ 29 ಲಕ್ಷದ ಹೆಚ್ಚುವರಿ ತರಗತಿ ಕೋಣೆಗಳು, ಪ್ರೌಢ ಶಾಲೆಯಲ್ಲಿ 8 ಲಕ್ಷದ ಡಿಜಿಟಲ್ ಕ್ಲಾಸ್ ರೂಮ್, ಲಾಲಸಿಂಗ್ ತಾಂಡಾದಲ್ಲಿ 30 ಲಕ್ಷದ ತೆರೆದ ಬಾವಿ, ಔರಾದ(ಬಿ) ಕೇದಾರೇಶ್ವರ ಮಂದಿರದ ಬಳಿ 25 ಲಕ್ಷದ ಸಮುದಾಯ ಭವನ, ಗೋಪಿನಾಯಕ್ ತಾಂಡಾದಲ್ಲಿ 4.5 ಲಕ್ಷದ ಸಮುದಾಯ ಭವನ, ಪೊಮಾ ತಾಂಡಾದಲ್ಲಿ 20 ಲಕ್ಷ, ಏಕನಾಥ ತಾಂಡಾದಲ್ಲಿ 30 ಲಕ್ಷ, ರಾಂಪೂರ ತಾಂಡಾದಲದಲಿ 20 ಲಕ್ಷದ ಕುಡಿಯುವ ನೀರಿನ ಕಾಮಗಾರಿಗಳು, ಗುರುನಾಥ ತಾಂಡಾದಲ್ಲಿ 65 ಲಕ್ಷ ಮೊತ್ತದ ಕೇಶವ ತಾಂಡಾದಿಂದ ಗುರುನಾಥ ತಾಂಡಾವರೆಗೆ ರಸ್ತೆ, ಕಂದಗೂಳನಲ್ಲಿ 192.50 ಲಕ್ಷದ ರಸ್ತೆ, ಬೇಲೂರ ಎನ್ ಗ್ರಾಮದಲ್ಲಿ 6.50 ಲಕ್ಷದ ಸಿಸಿ ರಸ್ತೆ, ಲಾಧಾ ಗ್ರಾಮ ವ್ಯಾಪ್ತಿಯ ಧರಿ ಹನುಮಾನ ಮಂದಿರದ ಬಳಿ 15 ಲಕ್ಷದ ಸಮುದಾಯ ಭವನ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸುತ್ತಿದ್ದೇನೆ. ಈ ದಿಶೆಯಲ್ಲಿ ಜನತೆಗೆ ಅತ್ಯಂತ ಅವಶ್ಯಕವಿರುವ ಕಾಮಗಾರಿಗಳನ್ನು ಕೈಗೊಂಡಿದ್ದು, ಎಲ್ಲ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಮತ್ತು ಗುಣಮಟ್ಟದಿಂದ ಮಾಡಿಕೊಡಬೇಕೆಂದು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಶಿವರಾಜ ಅಲ್ಮಾಜೆ, ರಾಮಶೆಟ್ಟಿ ಪನ್ನಾಳೆ, ಮಲ್ಲಪ್ಪ ನೇಳಗೆ, ಪ್ರಕಾಶ ಮೇತ್ರೆ, ಮಾಧವ ಮಿಠಾರೆ, ಖಂಡೋಬಾ ಕಂಗಟೆ, ರವೀಂದ್ರ ರೆಡ್ಡಿ, ಬಾಲಾಜಿ ಠಾಕೂರ್, ದೀಪಕ ಸಜ್ಜನಶೆಟ್ಟಿ, ದಯಾನಂದ ಘೂಳೆ, ಕೇರಬಾ ಪವಾರ, ಅಬ್ದುಲ್ ಪಠಾನ್, ಸಂತೋಷ ಪೊಕಲವಾರ, ಬಸವರಾಜ ಹಳ್ಳೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ನಂಜನಗೂಡು ಮಠದಲ್ಲಿ ರಥೋತ್ಸವ, ವಿಶೇಷ ಪೂಜೆ


**ವಿಜಯಪುರ, ಆ.4:** ನಗರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸೋಮವಾರ ಶ್ರೀ ಜಯತೀರ್ಥರ ಆರಾಧನೆಯನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಆರಾಧನೆ ಅಂಗವಾಗಿ ಬೆಳಿಗ್ಗೆ ಗುರುಸ್ತೋತ್ರ ಪಾರಾಯಣ, ಸುಧಾ ಪಾರಾಯಣ, ಫಲಪಂಚಾಮೃತ ಅಭಿಷೇಕ, ಅಲಂಕಾರ ಹಾಗೂ ಮಹಾಪೂಜೆ ನೆರವೇರಿತು. ಶ್ರೀ ಜಯತೀರ್ಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ವಿಶೇಷ ಪೂಜೆ ನಡೆಸಲಾಯಿತು.

ಬಳಿಕ ಮಠದ ಆವರಣದಲ್ಲಿ ಅಲಂಕೃತ ರಥದಲ್ಲಿ ಶ್ರೀ ಜಯತೀರ್ಥರ ಭಾವಚಿತ್ರ ಹಾಗೂ ಗ್ರಂಥಗಳನ್ನು ಪ್ರತಿಷ್ಠಾಪಿಸಿ ರಥೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಯಿತು. ಭಕ್ತರು ಭಜನೆ, ನಾಮಸಂಕೀರ್ತನೆಗಳ ಮೂಲಕ ಉತ್ಸವದಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಉಪನ್ಯಾಸ ನೀಡಿದ ಮಂತ್ರಾಲಯ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಪಂಡಿತ ಕರಣಂ ವೆಂಕಟೇಶಾಚಾರ್ಯ ಅವರು, "ಶ್ರೀ ಜಯತೀರ್ಥರ ಸ್ಮರಣೆ ಭಕ್ತರಲ್ಲಿ ಧರ್ಮನಿಷ್ಠೆ, ಜ್ಞಾನ ಮತ್ತು ವೈರಾಗ್ಯವನ್ನು ಬೆಳೆಸುತ್ತದೆ. ಅವರ ತತ್ತ್ವೋಪದೇಶಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶಕವಾಗಿವೆ" ಎಂದು ಹೇಳಿದರು.ಶ್ರೀ ಜಯತೀರ್ಥರು ರಚಿಸಿದ ಗ್ರಂಥಗಳು ಮಧ್ವಸಿದ್ಧಾಂತದ ಅಮೂಲ್ಯ ಸಂಪತ್ತಾಗಿದ್ದು, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ



ಮಹೋತ್ಸವದ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ದಿನವಿಡೀ ಅಪಾರ ಸಂಖ್ಯೆಯಲ್ಲಿ ಭಕ್ತರು ಮಠಕ್ಕೆ ಆಗಮಿಸಿ ವೃಂದಾವನ ದರ್ಶನ ಪಡೆದು ಆಶೀರ್ವಾದ ಪಡೆದರು. ಮಠವನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಗೋಪಾಲ ನಾಯಕ್, ವಾಮನರಾವ ದೇಶಪಾಂಡೆ, ವಿಜಯೇಂದ್ರ ಡಿ. ಜೋಶಿ, ಕೃಷ್ಣ ಪಡಗಾನೂರ, ಅಶೋಕ ತಾವರಗೇರಿ, ಶ್ರೀಧರ ಹರಿದಾಸ, ಭೀಮಣ್ಣ ಹೆಗಡ್ಯಾಳ, ದಾಮೋದರಾಚಾರ್ಯ, ಪ್ರಕಾಶ್ ಬಿಜಾಪುರ, ಡಿ.ಆರ್. ನಾಡಿಗ್, ಪ್ರದೀಪ್ ಪಾಟೀಲ ಸೇರಿದಂತೆ ಅನೇಕ ಭಕ್ತರು ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE